ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 32 ಆಗಸ್ಟ್ 10, 1980 ಬೆಲೆ : 50 ಪೈಸೆ

ರಾಜೀನಾಮೆ ಅವಶ್ಯ

ಕರ್ನಾಟಕ ರಾಜ್ಯಸರಕಾರದ ಕಾರ್ಮಿಕ ಮತ್ತು ಆಹಾರ ಸಚಿವ ಇಬ್ರಾಹಿಂ ಅವರ ಮೇಲೆ ಗಂಭೀರವಾದ ಭ್ರಷ್ಟಾಚಾರದ ಆರೋಪಗಳು ಬಂದ ಹಿನ್ನೆಲೆಯುಲ್ಲಿ ಅವರ ಮೇಲಿರುವ ಆಪಾದನೆಗಳ ತನಿಖೆ ನಡೆಸಲು ಸಿ.ಬಿ.ಐ.ಗೆ ಹೇಳುವುದಾಗಿ ರಾಜ್ಯದ ಮುಖ್ಯಮಂತ್ರಿ ಗುಂಡೂರಾವ್‌ರವರು ವಿಧಾನಸಭೆಯುಲ್ಲಿ ಹೇಳಿರುವರು.

ತಮ್ಮ ಸರಕಾರದ ಒಬ್ಬ ಮುಖ್ಯ ಸಚಿವರ ಮೇಲೆ ತಮ್ಮ ಸರಕಾರದ ನಿಯಂತ್ರಣದಲ್ಲಿರುವ ಸಿ.ಬಿ.ಐ.ಯಿಂದ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿಯವರು ಹೇಳಿರುವರಾದರೂ, ಆಪಾದಿತರು ಸರಕಾರದ ಉಚ್ಚಸ್ಥಾನದಲ್ಲಿರುವಾಗ ಪ್ರಯೋಜನ ಮತ್ತು ಪರಿಣಾಮಕಾರಿಯಾದ ತನಿಖೆ ನಡೆಸುವುದು ಎಷ್ಟರಮಟ್ಟಿಗೆ ಸಾಧ್ಯ ? ಸಾಧ್ಯವಿಲ್ಲ. ಆದುದರಿಂದ ಆಪಾದನೆಗೆ ಒಳಗಾದಿರುವ ಸಚಿವರು ರಾಜೀನಾಮೆ ಕೊಡುವುದು ಅವಶ್ಯ. ಹಾಗೆ ಮಾಡಿಲ್ಲವಾದರೆ ತನಿಖೆ ನಡೆಸುವುದು ಕೇವಲ ಒಂದು ನಾಟಕವಾಗುವುದಷ್ಟೆ.

ಸಂಪಾದಕೀಯ

ಸಚಿವ ಇಬ್ರಾಹಿಂ ಪ್ರಕರಣದ ಪರಿಣಾಮವಾಗಿಯೋ ಎಂಬಂತೆ ಹಿಂದೆ ಕೇಂದ್ರದಲ್ಲಿದ್ದ "ರೀಸರ್ಚ್ ಮತ್ತು ಅನಾಲಿಸಿಸ್ ವಿಂಗ್"ನ ಮಾದರಿಯಲ್ಲಿಯೇ ರಾಜ್ಯದಲ್ಲೂ ಒಂದು ವಿಭಾಗವನ್ನು ರಚಿಸುವುದಾಗಿ ಮುಖ್ಯಮಂತ್ರಿಯವರು ಹೇಳಿರುವರು. ಒಬ್ಬ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಅವರ ನೇತೃತ್ವದಲ್ಲಿರುವ ಈ ವಿಭಾಗವು ನೇರವಾಗಿ ಮುಖ್ಯಮಂತ್ರಿಯವರ ಕೈಕೆಳಗಿರುವುದು. ಈ ವಿಭಾಗದ ಘೋಷಿತ ಕೆಲಸವೆಂದರೆ ಸಾರ್ವಜನಿಕ ರಂಗದಲ್ಲಿ ಕೆಲಸ ಮಾಡುವ ಪ್ರಮುಖ ಮುಂದಾಳುಗಳು, ರಾಜಕೀಯ ವ್ಯಕ್ತಿಗಳು ಹಾಗೂ ಸಚಿವರಂತಹವರುಗಳ ಮೇಲೆ ನಿಗಾ ಇಟ್ಟು, ಮುಖ್ಯಮಂತ್ರಿಯವರಿಗೆ ವರದಿ ಕಳುಹಿಸುತ್ತಲಿರುವುದು. ಈ ಕೆಲಸಕಾರ್ಯಗಳಿಗಾದಿ ಈ ವರ್ಷ ಹತ್ತು ಲಕ್ಷ ರೂಪಾಯಿಗಳನ್ನು ಒದಗಿಸುವುದು.

ಭ್ರಷ್ಟಾಚಾರ ಎಲ್ಲೆಲ್ಲೂ ತಾಂಡವವಾಡುತ್ತಲಿರುವ ಇಂದಿನ ದಿನಗಳಲ್ಲಿ ಮಂತ್ರಿಗಳಿಂದ ಹಿಡಿದು ಸಾಮಾನ್ಯ ನೌಕರನ ತನಕವೂ ಭ್ರಷ್ಟಾಚಾರವು ಒಂದು ಜೀವನದ ಮಾರ್ಗವೇ ಎಂದು ಆದಿರುವಾಗ, ಆಡಳಿತ ಪಕ್ಷವಾದಿ

(ಕಡೇ ಪುಟ ನೋಡಿ)

ರೈತರ ಮೇಲಿನ ದಬ್ಬಾಳಿಕೆಯ ಖಂಡನೆ

ಕರ್ನಾಟಕ ಪ್ರಾಂತ ರೈತಸಂಘದ ಪದಾಧಿಕಾರಿಗಳಾದ ಕಾಂ. ಜಗನ್ನಾಥ ಹಾಗೂ ಕಾಂ. ಲಕ್ಷ್ಮಣನವರು ಮಲಪ್ರಭಾ ಅಚ್ಚುಕಟ್ಟು ಪ್ರದೇಶಗಳಾದ ನರಗುಂದ, ನವಲಗುಂದ, ಹಾಗೂ ಸಂವದತ್ತಿ ತಾಲ್ಲೂಕುಗಳಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸಿ ಈ ಕೆಳಗಿನ ಪ್ರಕಟಣೆಯನ್ನು ನೀಡಿದ್ದಾರೆ.

ಈ ಪ್ರದೇಶದ ರೈತರು ಮಿತಿ ಮೀರಿದ ನೀರಾವರಿ ತೆರಿಗೆ, ಲೆವಿ, ಬೇಸಾಯ ಸಾಧನಗಳ ಬೆಲೆಏರಿಕೆ ಮೊದಲಾದ ಅನೇಕ ಸಮಸ್ಯೆಗಳ ಬಗೆಗೆ ಅನೇಕ ದಿನಗಳಿಂದ ಹೋರಾಟ ನಡೆಸುತ್ತಿದ್ದರು. ಈ ಪ್ರದೇಶದ ರೈತ ಸಮನ್ವಯ ಸಮಿತಿಯನ್ನು ರಚಿಸಿಕೊಂಡು, ಅಲ್ಲದೆ ಪ್ರಾಂತ ರೈತಸಂಘದ ಮಾರ್ಗದರ್ಶನದಲ್ಲಿ ಶಾಂತ ರೀತಿಯಿಂದ ಹೋರಾಟವನ್ನು ನಡೆಸಿದರೂ ಸರಕಾರ ರೈತರ ಬೇಡಿಕೆಗಳಿಗೆ ಕಿಂಚಿತ್ತೂ ಗಮನಕೊಡಲಿಲ್ಲ. ತಮ್ಮ ಬೇಡಿಕೆಗಳನ್ನು ಒತ್ತಾಯಿಸಲು ಇದೇ ಜುಲೈ 21ರಂದು ಈ ಮೂರು ತಾಲ್ಲೂಕಿನಲ್ಲಿ ಬಂದ್ ಕರೆ ಕೊಡಲಾದಿತ್ತು. ಶಾಂತವಾದಿದ್ದ ಹೋರಾಟವನ್ನು ದಬ್ಬಾಳಿಕೆಯ ಮೂಲಕ ಮುರಿಯುವ ಉದ್ದೇಶದಿಂದ ಸರಕಾರ ನರಗುಂದ ಹಾಗೂ ನವಲಗುಂದಗಳಲ್ಲಿ ಅನವಶ್ಯಕವಾದಿ ಗೋಲಿಬಾರ್ ಮಾಡಿ ಎರಡು ರೈತರ ಬಲಿ ತೆಗೆದುಕೊಂಡಿತ್ತು. ನಂತರ ನಡೆದ ಘಟನೆಗಳಿಗೆ ಈ ಪೋಲೀಸ್ ಹಿಂಸಾಪ್ರಚೋದನೆಯೇ ಕಾರಣವೇ ಹೊರತು ರೈತರಲ್ಲ, ಸರಕಾರದ ಈ ದಬ್ಬಾಳಿಕೆ ನೀತಿಯನ್ನು ಪ್ರಾಂತ ರೈತಸಂಘವು ಉಗ್ರವಾದಿ ಖಂಡಿಸುತ್ತದೆ. ಮತ್ತು ದಬ್ಬಾಳಿಕೆಯ ಮೂಲಕ ಯಾವ ಹೋರಾಟವನ್ನು ಮುರಿಯುವದು ಅಸಾಧ್ಯವೆಂದು ಸರಕಾರವನ್ನು ಎಚ್ಚರಿಸುತ್ತದೆ.

ಉತ್ತರ ಕರ್ನಾಟಕದ ಜನತೆ ರೈತರ ಬೇಡಿಕೆಗಳ ಬೆಂಬಲಾರ್ಥ ಹಾಗೂ ಬೆಲೆಏರಿಕೆ ವಿರೋಧವಾಗಿ ಕಳೆದ ಕೆಲ ದಿನಗಳಲ್ಲಿ ನಡೆಸಿದ ಧೀರ ಹೋರಾಟಗಳನ್ನು ರೈತಸಂಘವು ಪ್ರಶಂಸಿಸುತ್ತದೆ, ಈ ಹೋರಾಟಗಳಲ್ಲಿ ಇದುವರೆಗೆ ಪೋಲೀಸ್ ಗುಂಡುಗಳಿಗೆ 18 ಜನರು ಆಹುತಿಯಾದಿದ್ದಾರೆ.

ಬೆಲೆ ನಿಯಂತ್ರಣ ಹಾಗೂ ರೈತರ ಸಮಸ್ಯೆಯ ಪರಿಹಾರಕ್ಕೆ ಸರಕಾರ ಇದುವರೆಗೆ ಯಾವುದೇ ನಿಜವಾದ ಕ್ರಮವನ್ನು ಕೈಕೊಂಡಿಲ್ಲ, ವ್ಯತಿರಿಕ್ತ

(ಕಡೇ ಪುಟ ನೋಡಿ)

ವಿವಿಧ ಪಕ್ಷಗಳ ಮತ್ತು ಮುಖಂಡರುಗಳ ಬಣ್ಣ ಬಯಲು

ಮಲಪ್ರಭಾ ರೈತ ಚಳುವಳಿ ನಿಲ್ಲಲಾರದು

ಉತ್ತರ ಕರ್ನಾಟಕ ಮಲಪ್ರಭಾ ನೀರಾವರಿ ಪ್ರದೇಶದ ರೈತ ಚಳುವಳಿ ಮತ್ತು ಇತ್ತೀಚಿಗಿನ ಘಟನೆಗಳು ವಿವಿಧ ಪಕ್ಷಗಳ ಮತ್ತು ಮುಖಂಡರುಗಳ, ಅದರಲ್ಲೂ ಆಡಳಿತ ನಡೆಸುತ್ತಲಿರುವ ಕಾಂಗ್ರೆ ಪಕ್ಷದ ಮುಂದಾಳುಗಳ ಮತ್ತು ಸರಕಾರದ ಬಣ್ಣ ಬಯಲು ಮಾಡಿದೆ.

ಮಲಪ್ರಭಾ ನೀರಾವರಿ ಪ್ರದೇಶದ ರೈತ ಮತ್ತು ಕೃಷಿಕೂಲಿಗಾರರ ಸಮಸ್ಯೆ ಬಹಳ ಹಿಂದಿನದು. ಕಳೆದ ಎರಡು ವರ್ಷಗಳಿಂದ ನರಗುಂದದಿಂದ ಪ್ರಾರಂಭವಾಗಿ ನೀರಾವರಿ ಪ್ರದೇಶದ ನೆರೆಯ ತಾಲ್ಲೂಕುಗಳಿಗೂ ಪಸರಿಸಿ, ರೈತರ ಶಾಂತಯುತವಾದ ಸಂಘಟಿತ ಹೋರಾಟ ನಡೆಯುತ್ತಾ ಬಂದಿದೆ. ಮನವಿ ಪತ್ರಗಳನ್ನು ಅರ್ಪಿಸುವುದರಿಂದ ಮೊದಲ್ಗೊಂಡು, ಐದು ಸಹಸ್ರ ರೈತರು ಸರದಿ ಅನ್ನಸತ್ಯಾಗ್ರಹದಲ್ಲಿ ಪಾಲ್ಗೊಂಡಿರುವ ಹೋರಾಟಗಳು ಸಜೆದಿವೆ ರಾಜ್ಯದ ಮುಖ್ಯಮಂತ್ರಿಯವರಿಗೆ ನರಗುಂದದಲ್ಲಿ ಸುಮಾರು ಎರಡು ಸಹಸ್ರ ರೈತರು ಕಾಂ.ವಿ.ಎನ್. ಹಳಕಟ್ಟಿಯವರು ಮತ್ತಿತರ ರೈತ ಮುಂದಾಳುಗಳ ನೇತೃತ್ವದಲ್ಲಿ ಮನವಿ ಇತ್ತಿರುವರು. ಹಲವಾರು ಜನ ಮಡಿಳೆಯರೂ ಅನ್ನಸತ್ಯಾಗ್ರಹದಲ್ಲಿ ಭಾಗವಹಿಸಿರುವರು.

ಇಷ್ಟೆಲ್ಲಾ ಆದರೂ ಜನತೆಯ ಸಮಸ್ಯೆ ಪರಿಹಾರಕ್ಕೆ ಹೋರಾಡಲೆಂದು ಜನತೆಯೇ ಆಯ್ಕೆ ಮಾಡಿದ ಶಾಸಕರುಗಳಾಗಲೀ, ಮಂತ್ರಿಗಳಾಗಲೀ, ಈ ಬಗ್ಗೆ ಚಕಾರ ಶಬ್ದವೆತ್ತಲಿಲ್ಲ. ಏನೇನೂ ಮಾಡಲಿಲ್ಲ. ಶಾಸಕರಾರೂ ಈ ಬಗ್ಗೆ ವಿಧಾನಸೌಧದೊಳಗೆ ಸ್ವರ ಎಬ್ಬಿಸಲಿಲ್ಲ. ಆದರೆ ಯಾವಾಗ ಅಧಿಕಾರಿಗಳ ಮತ್ತು ಪೋಲೀಸರ ದುರ್ವರ್ತನೆ ಮತ್ತು ಉದ್ಧಟತನದಿಂದ ಹೋರಾಟದ ರೂಪಕ್ಕೆ ಹೊಸ ತಿರುವು ಬಂತೋ ಆಗಲೇ ಶಾಸಕರುಗಳಿಗೂ, ಮಂತ್ರಿಗಳಿಗೂ ಎಚ್ಚರವಾದುದು. ಗೋಲೀಬಾರಿನಲ್ಲಿ ಹಲವಾರು ಮಂದಿ ಸತ್ತು ಹೋದ ಮೇಲೆಯೇ ಮಂತ್ರಿಗಳೂ ಶಾಸಕರುಗಳೂ ಚಳುವಳಿ ನಡೆಯುತ್ತಲಿರುವ ಪ್ರದೇಶಕ್ಕೆ ಧಾಳಿ ಇಟ್ಟಿರುವುದು. ಇಷ್ಟೆಲ್ಲಾ ಆದ ಮೇಲೆಯೇ ಸಮಸ್ಯೆಯೇನೆಂದು ತಿಳಿಯಲು ಮತ್ತು ನಡೆದ ಘಟನೆಗಳ ಬಗ್ಗೆ ವರದಿ ಮಾಡಲು ತಂಡೋಪತಂಡವಾದಿ ಮುಖಂಡರುಗಳ ಸೈನ್ಯವೇ ಹೋಗುತ್ತಲಿದೆ. ಇವೆಲ್ಲಾ ಯಾಕೆ ಬೇಕು? ಜನರೊಡನೆ ಸಂಪರ್ಕವಿಟ್ಟುಕೊಂಡು, ಜನತೆಯ ಹೋರಾಟಗಳಿಗೆ ಬೆಂಬಲವಿತ್ತು, ಸಮಸ್ಯೆಗಳ ಬಗ್ಗೆ ಅಭ್ಯಸಿಸುತ್ತಾ ಬಂದಿದ್ದರೆ ಈ ಟಿ.ಡಿ.ಟಿಗಳ ಅವಶ್ಯಕತೆ ಇದ್ದಿಲ್ಲ. ಆದುದರಿಂದಲೇ ಮಲಪ್ರಭಾ ಪ್ರದೇಶದ ರೈತರು ಹೇಳುವುದು "ಯಾರು ಬೇಕಾದರೂ ಬರಲಿ. ನಾವು ನಮ್ಮ ಹೋರಾಟ ನಡೆಸುವೆವು".

ಇನ್ನೂ ವಿಚಿತ್ರವೆಂದರೆ ಸರಕಾರವು ರೈತರಿಗೆ ಅನುಕೂಲಕ್ಕಾಗಿ ಎಂದು ಕೆಲವು ರಿಯಾಯ್ತಿಗಳನ್ನು ಘೋಷಿಸಿದ್ದೆ ತಡ ಕೆಲವು ವಿರೋಧ ಪಕ್ಷಗಳ ಮುಖಂಡರುಗಳು ಕಾಂಗ್ರೆ ಸರಕಾರವನ್ನು ಅಭಿನಂದಿಸಿ, ಸರಕಾರಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿ, ರೈತರು ಚಳುವಳಿಯನ್ನು ನಿಲ್ಲಿಸಲು ಕರೆ ಇತ್ತಿರುವುದು. ಮಲಪ್ರಭಾ ನೀರಾವರಿ ಪ್ರದೇಶದ ರೈತರ ಎಲ್ಲಾ ಬೇಡಿಕೆಗಳು ಏನೇನು, ಇವಲ್ಲಿ ಎಷ್ಟನ್ನು ಸರಕಾರ ಒಪ್ಪಿದೆ, ಚಳುವಳಿಯುಲ್ಲಿ ಬಂಧಿತರಾದವರ ಬಿಡುಗಡೆ ಮತ್ತು ಅವರ ಮೇಲೆ ಹಾಕಿರುವ ಕೇಸುಗಳ ಬಗ್ಗೆ ಏನು ಎಂಬುದು ಯಾವುದನ್ನೂ ಯೋಚಿಸದೆ, ರೈತ ಚಳುವಳಿಯನ್ನು ತಾವೇ ಸಂಘಟಿಸಿದ ರೀತಿಯಲ್ಲಿ ಹೋರಾಟವನ್ನು ನಿಲ್ಲಿಸಲು ಕರೆ ಇತ್ತಿರುವುದು ಹಾಸ್ಯಾಸ್ಪದ, ರೈತರ ಚಳುವಳಿ ನಡೆಸುವ ಸಮನ್ವಯ ಸಮಿತಿಯು ಹೋರಾಟವನ್ನು ನಿಲ್ಲಿಸಲಾರೆವು ಎಂದು ತಿಳಿಯಪಡಿಸಿ, ಇವರೆಲ್ಲರಿಗೂ ಉತ್ತರವಿತ್ತಿದೆ; ಇವರ ಬಣ್ಣ ಬಯಲಾಗಿದೆ.

ಬಂಧಿತರಾದ ರೈತ ಮುಖಂಡರುಗಳೆಲ್ಲರ ನಿಶ್ಶರ್ತವಾಗಿ ಬಿಡುಗಡೆ, ಅವರ ಮೇಲೆ ಹಾಕಿರುವ ಕೇಸುಗಳ ರದ್ದತಿ ಬಗ್ಗೆ ಸರಕಾರ ಕ್ರಮವಹಿಸಬೇಕು; ಅದರೊಂದಿಗೆ ಎಲ್ಲಾ ಬೇಡಿಕೆಗಳನ್ನೂ ಮನ್ನಿಸಿ, ನ್ಯಾಯಸಿಗಬೇಕು ಎಂದು ಹೇಳಿರುವ ರೈತ ಸಮನ್ವಯ ಸಮಿತಿಯು ಹಿಂದಿನಿಂದಲೇ ಮಂಡಿಸುತ್ತಾ ಬಂದಿರುವ ಬೇಡಿಕೆಗಳು ಮತ್ತು ಸರಕಾರ ಈಗ ಘೋಷಿಸಿರುವ ರಿಯಾಯ್ತಿಗಳನ್ನು ನೋಡಿದಲ್ಲಿ, ಇನ್ನೂ ಬಹಳಷ್ಟು ಬೇಡಿಕೆಗಳು ಹಾಗೆಯೇ ಇವೆ ಎಂಬುದು ರೈತರು ಮುಂದಿಟ್ಟಿರುವ ಈ ಕೆಳಗಿನ ಬೇಡಿಕೆಗಳ ಪಟ್ಟಿಯಿಂದ ವಿದಿತವಾಗುತ್ತದೆ.

ಬೇಡಿಕೆಗಳು :

1. ಚಿಟುಗಾವಲಿಗಳ ರಚನೆಯನ್ನು ಇನ್ನೊಮ್ಮೆ ಪುನರ್ವಿಮರ್ಶಿಸಿ ಅವುಗಳನ್ನು ಯಾವುದಾದರೂ ಹಳ್ಳಕೊಳ್ಳಸರುವಿಗೊ ಸರಿಯಾದಿ ಕೂಡಿಸಬೇಕು.

2. ಉಪಗಾವಲಿ - ಚಿಟುಗಾವಲಿಗಳನ್ನು ಪುನರ್ವಿಮರ್ಶಿಸಿ ಕಮಾಂಡ ಏರಿಯಾದ ಎಲ್ಲ ಜಮೀನಿಗೂ ಸಾಕಷ್ಟು ನೀರು ಪೂರೈಕೆಯಾಗುವ ಹಾಗೆ ಕಾಲುವೆಗಳ ಪುನರ್ನಿರ್ಮಾಣವಾಗಬೇಕು.

(ಕಡೇ ಪುಟ ನೋಡಿ)

ಆಧುನಿಕ ರಾಜಕೀಯ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

(ಹಿಂದಿನ ಸಂಚಿಕೆಯಿಂದ)

ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಮತ್ತು ನೌಕರಿಗಳಿಗೆ ಹಿಂದುಳಿದ ವರ್ಗಗಳಿಗೆ ಮೀಸಲು ಸ್ಥಾನಗಳ ವಿಚಾರದಲ್ಲಿ 'ಮುಂದುವರೆದ' ಜನಾಂಗ ಮತ್ತು 'ಹಿಂದುಳಿದ' ಜನಾಂಗದ ವಕ್ತಾರರು ಒಬ್ಬರನ್ನೊಬ್ಬರು ವಿರೋಧಿಸಿದರು. ಮುಂದುವರೆದ ಜನಾಂಗದವರು ಮೀಸಲಾತಿಯನ್ನು 'ಅವೈಜ್ಞಾನಿಕ'ವೆಂದು ಖಂಡಿಸಿದರು. ಏಕೆಂದರೆ ಇದು ಜಾತಿ ಆಧಾರದ ಮೇಲೇ ನಿರ್ಧರಿಸಲ್ಪಟ್ಟಿದೆ ಮತ್ತು ಇಂದಿನ ರಾಜಕೀಯ ಜೀವನದಲ್ಲಿ 'ಜಾತಿ' ಅಂಶ ಎಷ್ಟು ಮಾತ್ರಕ್ಕೂ ಪ್ರಸ್ತುತವಾದ ಅಂಶವಲ್ಲ. 'ಹಿಂದುಳಿದ' ಜನಾಂಗದ ವಕ್ತಾರರು ಮೀಸಲು ಸ್ಥಾನಗಳ ಯೋಜನೆಯು ಪೂರ್ತಿ ಯಾವ ಬದಲಾವಣೆಯೂ ಇಲ್ಲದೆ ಹಾಗೆಯೇ ಉಳಿಯಬೇಕೆಂದರು.

ಈ ಪ್ರಶ್ನೆಯ ಸುತ್ತ ಒಂದು ದೊಡ್ಡ ಯುದ್ಧವೇ ಈಗ ನಡೆಯುತ್ತಿದೆ. ಇದು ಹೇಗಾದರೂ ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಆಡಳಿತ ಪಕ್ಷ ಮತ್ತು ವಿರೋಧಪಕ್ಷವೂ ಸೇರಿ ಹೆಚ್ಚು ಕಡಿಮೆ ಎಲ್ಲಾ ರಾಜಕೀಯ ಪಕ್ಷಗಳೂ 'ಮುಂದುವರೆದ' ಮತ್ತು 'ಹಿಂದುಳಿದ' ಜನಾಂಗದ ಈ ಬೇಡಿಕೆಯನ್ನು ಪೂರ್ಣವಾಗಿ ತಿರಸ್ಕರಿಸಿದೆ. ವಾಸ್ತವವಾಗಿ ನೆಟ್ಟೂರು ಸಮಿತಿ ಶಿಫಾರಸುಗಳನ್ನು ಅವು ಸಮ್ಮತಿಸಿವೆ. ಜಾತಿ ಆಧಾರದ ಮೇಲೆ ಕೊಡುವ ಮೀಸಲು ಸ್ಥಾನಗಳನ್ನು ಇನ್ನೂ ಕೆಲವು ಕಾಲ ಮುಂದುವರೆಸಬೇಕು. ಹಿಂದುಳಿದ ಜನಾಂಗಗಳು ತಮ್ಮ ಹಿಂದುಳಿಯುವಿಕೆಯನ್ನು ನೀಗಿಕೊಂಡಿವೆಯೇ ಎಂಬುವುದರ ಬಗ್ಗೆ ಕಾಲಕಾಲಕ್ಕೆ ಪರೀಕ್ಷೆ ನಡೆಸುವ ಅವಕಾಶವೂ ಇರಬೇಕು, ಹಿಂದುಳಿದ ಜನಾಂಗಕ್ಕೆ ಸೇರಿದ ಯಾವ ಕುಟುಂಬಗಳ ವಾರ್ಷಿಕ ವರಮಾನ ಒಂದು ನಿರ್ದಿಷ್ಟವಾದ ಮಟ್ಟವನ್ನು ಮೀರಿ ನಿಲ್ಲುವುದೋ ಅಂತಹ ಕುಟುಂಬಗಳಿಗೆ ಈ ಅವಕಾಶಗಳು ಇರಬಾರದು–ಈಗಿನ ಜಾತ್ಯತೀತ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಆಧರಿಸುವ ರಾಜಕೀಯ ಪಕ್ಷಗಳು ನೆಟ್ಟೂರು ಸಮಿತಿಯ ಈ ಶಿಫಾರಸುಗಳನ್ನು ಒಪ್ಪುತ್ತವೆ, ಏಕೆಂದರೆ ಮುಂದುವರೆದ ಜನಾಂಗಕ್ಕೆ ಸರಿಸಮಾನವಾಗಿ ನಿಲ್ಲಬಲ್ಲ ಹಿಂದುಳಿದ ಜನಾಂಗಕ್ಕೆ ಎಲ್ಲಾ ಮೀಸಲು ಸ್ಥಾನಗಳನ್ನು ತೆಗೆದುಹಾಕಿ, ಯಾರು ಹಿಂದುಳಿದ ಜನಾಂಗಕ್ಕೆ ಸೇರಿದ್ದಾರೋ ಮತ್ತು ಯಾರ ವಾರ್ಷಿಕ ವರಮಾನ ನಿಗಧಿಸಲ್ಪಟ್ಟ ನಿರ್ದಿಷ್ಟವಾದ ಮಟ್ಟವನ್ನು ಮೀರುವುದಿಲ್ಲವೋ ಅಂತಹವರಿಗೆ ಮಾತ್ರ ಈ ಅವಕಾಶ ಮುಂದುವರೆಯಬೇಕು ಎಂದೂ ಅಭಿಪ್ರಾಯಪಟ್ಟವೆ.

ರಾಜ್ಯದ ಎಲ್ಲಾ ಹಿರಿಯ ರಾಜಕೀಯ ಪಕ್ಷಗಳೂ ಈ ಒಪ್ಪಂದವನ್ನು ಒಪ್ಪಿಕೊಂಡಿರುವುದನ್ನು ನೋಡಿದಾಗ, ಸ್ಪಷ್ಟವಾಗುವ ಒಂದು ವಿಚಾರವೆಂದರೆ, ಹಲವಾರು ಸಂಶೋಧಕರ ಮತ್ತು ಪ್ರಚಾರಕರ ಅತಿರೇಕದ ಆಲೋಚನೆಗಳು ತಪ್ಪೆನ್ನುವುದು. ಕೆಲವರು ತೀವ್ರವಾಗಿ ವಾದಿಸುವಂತೆ, ಎಲ್ಲಾ ರಾಜಕೀಯ ವಿಚಾರಗಳೂ ಜಾತಿಯ ಕೈ ಕೆಳಗೇ ನಿಲ್ಲುವಷ್ಟು 'ಜಾತಿ' ಎನ್ನುವುದು ಪ್ರಧಾನವಾದ ಅಂಶವಲ್ಲ. ಅಥವಾ ಇನ್ನು ಕೆಲವರು ವಾದಿಸುವಂತೆ 'ಜಾತಿ' ಎನ್ನುವುದು ಯಾವುದೇ ರೀತಿಯಲ್ಲಿ ಪರಿಗಣಿಸಬೇಕಾದ ಅಂಶವೇ ಅಲ್ಲ ಎನ್ನುವುದೂ ಸರಿಯಲ್ಲ. ಇಂದಿನ ಪರಿಸ್ಥಿತಿಯಲ್ಲಿ ಈ ಎಲ್ಲಾ ವಿಚಾರಗಳನ್ನೂ ಸರಿಯಾಗಿ ವಿಶ್ಲೇಷಿಸಿದಾಗ ಸ್ಪಷ್ಟವಾಗುವ ವಿಚಾರವೆಂದರೆ ರಾಜಕೀಯ ಜೀವನದಲ್ಲಿ ವರ್ಗಗಳು ಮತ್ತು ರಾಜಕೀಯ ಪಕ್ಷಗಳು ದಿನೇ ದಿನೇ ಉನ್ನತ ಪ್ರಾಮುಖ್ಯತೆಯನ್ನು ಪಡೆಯುತ್ತಿವೆ. ಆದರೆ ಸಾಮಾಜಿಕ ಅಂಶವಾದ ಜಾತಿಯ ಅಸ್ತಿತ್ವ ಮತ್ತು ಅದರಿಂದ ಹುಟ್ಟುವ ಸಮಸ್ಯೆಗಳನ್ನು ಅಲ್ಲಗಳೆಯುವಂತಿಲ್ಲ.

ಅಂತರ್‌ಜಾತಿ ಭೋಜನ, ಅಂತರ್ಜಾತಿ ವಿವಾಹ ಇವುಗಳ ಬಗ್ಗೆ ಇರುವ ನಿಷೇಧಗಳು ಕ್ರಮೇಣ ಹೋಗುತ್ತಿದ್ದರೂ, ಅಸ್ಪೃಶ್ಯತಾ ನಿವಾರಣೆಯ ವಿಚಾರ ತುಂಬ ಹಳ್ಳಿಗಳಲ್ಲಿ ಇಲ್ಲ. ಆದರೆ ನೆಟ್ಟೂರು ಸಮಿತಿ ಹೇಳುವ "ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಿಂದುಳಿಯುವಿಕೆ ಮತ್ತು ಇದರಿಂದಾಗಿ ಸರ್ಕಾರಿ ನೇಮಕದಲ್ಲಿ ಭಾಗ ಪಡೆಯುವುದರಲ್ಲೂ ಹಿಂದುಳಿಯುವ ಸ್ಥಿತಿ ಇಂದಿಗೂ ಮುಂದುವರೆಯುತ್ತಿದೆ. ಇದೂ ಅಲ್ಲದೆ ಜಾತಿ, ಉಪಜಾತಿ ಮತ್ತು ಧಾರ್ಮಿಕ ಕೋಮು ಪ್ರಜ್ಞೆಗಳು ತಮ್ಮ ಪ್ರಭಾವವನ್ನು ರಾಜಕೀಯ ಪಕ್ಷಗಳ ಮೇಲೂ ಬೀರುತ್ತಿವೆ. ಚುನಾವಣೆಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡುವಾಗ, ಸಚಿವ ಪದವಿ ಕೊಡುವಾಗ ಯಾವುದೇ ರಾಜಕೀಯ ಪಕ್ಷವೂ ಜಾತಿಯನ್ನು ಗಮನಿಸದೆ ಇಲ್ಲ

ತುಂಬಾ ಮುಂದುವರೆದ ಸಿದ್ಧಾಂತವನ್ನುಳ್ಳ ಕಾರ್ಮಿಕವರ್ಗವೂ ಕೂಡ ಈ ಜಾತಿ ಅಂಶವನ್ನು ಲೆಕ್ಕಕ್ಕೆ ಇಡಬೇಕಾಗುತ್ತದೆ ಇದನ್ನು ಅರ್ಥಮಾಡಿಕೊಳ್ಳದಿದ್ದರೆ ಬೂರ್ಜ್ವಾ ಭೂಮಾಲೀಕರ ವಿರುದ್ಧ ಕಾರ್ಮಿಕ, ಅರೆಕಾರ್ಮಿಕ ಶಕ್ತಿಗಳನ್ನು ಒಗ್ಗೂಡಿಸುವ ಹೋರಾಟ ದುರ್ಬಲವಾಗುತ್ತದೆ. ಹೀಗೆ ಇದನ್ನು ಪರಿಗಣಿಸುವಾಗ, 'ಹಿಂದುಳಿದ' ಕೋಮುಗಳಲ್ಲಿ ಬೆಳೆಯುತ್ತಿರುವ ಬೂರ್ಜ್ವಾ ಭೂಮಾಲೀಕ ಅಂಶಗಳಿಗೆ ಕಾರ್ಮಿಕ ವರ್ಗದ ಪಕ್ಷವು ತನ್ನನ್ನು ತಾನು ಬಲಿಕೊಡಲಾರದು. (ಮುಗಿಯಿತು)

ಇ. ಎಂ. ಎಸ್. ನಂಬೂದಿರಿಪಾಡ್

ರೈತರಿಗೆ ಬೆಂಬಲ ಪೋಲೀಸರಿಗೆ ಧಿಕ್ಕಾರ

ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರ ಹೋರಾಟಕ್ಕೆ ರಾಜ್ಯದಾದ್ಯಂತ ಬೆಂಬಲಿಸುವ ಮೆರವಣಿಗೆಗಳು, ಸಭೆಗಳು ನಡೆದಿವೆ. ಹಾಗೆಯೇ ಅವರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ವಿರೋಧಿಸಿ, ಪ್ರತಿಭಟನೆ ಪ್ರದರ್ಶನಗಳು ಜರುಗಿರುವ ವರದಿಗಳು ರಾಜ್ಯದ ಹಲವಾರು ಕಡೆಗಳಿಂದ ಬಂದಿವೆ. ವಿರೋಧ ಪಕ್ಷಗಳು ಕೆಲವೆಡೆ ಒಗ್ಗಟ್ಟಾಗಿ ಈ ಕಾರ್ಯಕ್ರಮಗಳನ್ನು ನಡೆಸಿವೆ.

ಬಿಜಾಪುರ :

ಬಿಜಾಪುರ ನಗರದಲ್ಲಿ ಪ್ರತಿಬಂಧಕಾಜ್ಞೆ ಇದ್ದರೂ ಸಹ ಜುಲೈ 28ರಂದು ಎಲ್ಲ ಪಕ್ಷಗಳ ಕಾರ್ಯಕರ್ತರು ಭಾರಿ ಮೆರವಣಿಗೆ ನಡೆಸಿದರು. ಪ್ರತಿಬಂಧಕಾಜ್ಞೆ ಮುರಿದು ಸಾವಿರಾರು ಮೆರವಣಿಗೆಕಾರರು ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗಿ ಮನವಿ ಅರ್ಪಿಸಿದರು, ರೈತರ ಸಮಸ್ಯೆಗಳಿಗೆ ಪರಿಹಾರ, ಅವಶ್ಯಕ ವಸ್ತುಗಳ ಬೆಲೆ ಇಳಿತ, ಬಿಜಾಪುರ ಜಿಲ್ಲೆಯಲ್ಲಿ ಬರಗಾಲ ಎಂಬ ಘೋಷಣೆ ಮುಂತಾದ ಬೇಡಿಕೆಗಳು ಅದರಲ್ಲಿದ್ದವು.

ವಿರೋಧ ಪಕ್ಷಗಳ ಬಹಿರಂಗ ಸಭೆಯಲ್ಲಿ ಪೋಲೀಸರಿಂದ ಮೃತಪಟ್ಟವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಅವರ ಕುಟುಂಬದವರಿಗೆ ಪರಿಹಾರ, ಮತ್ತು ಗೋಲೀಬಾರಿನ ನ್ಯಾಯಾಂಗ ವಿಚಾರಣೆಗೆ ಸಭೆ ಒತ್ತಾಯಿಸಿತು. ಎನ್. ಕೆ. ಉಪಾಧ್ಯಾಯ, ಜಕ್ರಿಯಾ ಶಾಲೀಭಾಗ, ವಿಠ್ಠಲ ಸೊನ್ನದ (ಸಿ. ಪಿ. ಎಂ.) ಸಿ. ನಾಗರಾಣ (ಜನತಾ) ಪಾಯಣ್ಣ, ನಾಗರಾಳ, ಪೀರಬಾಗ್ (ಕಾಂಗ್–ಯು) ಡಾ. ಮಹೇಂದ್ರಕರ (ಬಿಜೆಪಿ) ಎಲ್. ಬಿ. ಲಾಯದಗುಂದಿ, ಚಂಚಲಕರ, (ಸಿಪಿಐ) ಭೀಮಾಸಿ ಕಲಾದಗಿ (ರೈತಸಂಘ) ಮತ್ತು ಬಂಡಾಯ ಸಾಹಿತ್ಯ ಸಂಘಟನೆ, ವಿದ್ಯಾರ್ಥಿ ಫೆಡರೇಶನ್ನಿನ ನೂರಾರು ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಿದ್ದರು.

ಕುಣಿಗಲ್ :

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್ (ಯು) ಹಾಗೂ ಜನತಾ ಪಕ್ಷದ ಕರೆಯ ಮೇರೆಗೆ 31-7-80 ರಂದು ಯಶಸ್ವಿಯಾಗಿ ಕುಣಿಗಲ್ ಬಂದ್ ನಡೆಸಲಾಯಿತು. ರೈತರಿಗೆ ಬೆಂಬಲಿಸಿ ನಡೆದ ಈ ಬಂದ್ ಮತ್ತು ಬಹಿರಂಗ ಸಭೆಯಲ್ಲಿ ವೈ ಕೆ ರಾಮಯ್ಯ, ಮರಿಯಪ್ಪ, ಬೋರೇಗೌಡ, ಅಂಜಪ್ಪ, ಯೂನುಸ್‌ಖಾನ್, ಬಿ ವಿ. ಗಂಗನಗೌಡ, ನಾಗರಾಜ್, ಸಿ. ಲಿಂಗಯ್ಯ, ತಿಮ್ಮೇಗೌಡ ಭಾಗವಹಿಸಿದ್ದರು. ಕೃಷ್ಣಸ್ವಾಮಿ, ಮುದ್ದಹನುಮಯ್ಯ ಮಾತನಾಡಿದರು.

ಶಿಡ್ಲಘಟ್ಟ :

ಪೋಲೀಸ್ ದೌರ್ಜನ್ಯವನ್ನು ಪ್ರತಿಭಟಿಸಿ ಸಿ. ಪಿ. ಐ. (ಎಂ), ಕಾಂಗ್–ಯು, ಕಾಂಗ್ಐ, ಬಿ. ಜೆ ಪಿ., ಹಾಗೂ ಸ್ಥಳೀಯ ಸಂಘಸಂಸ್ಥೆಗಳ ಆಶ್ರಯದಲ್ಲಿ 31-7-80 ರಂದು ಶಿಡ್ಲಘಟ್ಟ ಬಂದ್ ಆಚರಿಸಲಾಯಿತು. ಮೆರವಣಿಗೆ ಮತ್ತು ಬಹಿರಂಗ ಸಭೆ ಕೂಡ ನಡೆಸಲಾಯಿತು.

ತುಮಕೂರು :

ಸಿ. ಪಿ. ಐ. (ಎಂ), ಸಿ. ಪಿ ಐ, ಕಾಂಗ್-ಯು., ಬಿ. ಜೆ. ಪಿ.. ಜನತಾ, ಲೋಕದಳ, ಎಸ್. ಎಫ್. ಐ. ಮತ್ತಿತರ ಸಂಸ್ಥೆಗಳ ವಿರೋಧ ಪಕ್ಷಗಳ ಸಂಯುಕ್ತ ಹೋರಾಟ ಸಮಿತಿಯ ಆಶ್ರಯದಲ್ಲಿ ತುಮಕೂರಿನಲ್ಲಿ 31-7-80ರಂದು ಮೆರವಣಿಗೆ ಆರಂಭವಾಯಿತು. ಸರ್ಕಾರದ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗಿ, ಕೊನೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ತುಮಕೂರು ಬಂದ್ ನೂರಕ್ಕೆನೂರು ಯಶಸ್ವಿಯಾಯಿತು. ಎಲ್ಲ ವ್ಯಾಪಾರ ವಹಿವಾಟು ಸ್ಥಗಿತವಾಗಿತ್ತು ಶಾಂತರೀತಿಯ ಪ್ರದರ್ಶನ ತುಮಕೂರಿನ ಇತಿಹಾಸದಲ್ಲೇ ಹೊಸ ದಾಖಲೆ ಸ್ಥಾಪಿಸಿತು. ಬೃಹತ್ ಮೆರವಣಿಗೆಯಲ್ಲಿ ಸಿ ಪಿ ಎಂ.ನ ಕೆ. ಆರ್. ನಾಯಕ್, ದಸ್ತಗೀರ್, ಹೆಚ್. ಸಿ. ಚೆನ್ನಪ್ಪ, ಟಿ ಎಲ್. ತಿಮ್ಮಪ್ಪ. ವಿ. ಚಿಕ್ಕವೀರಯ್ಯ, ನಜೀರ್ ಅಹಮದ್, ಸಯ್ಯದ್ ಅನ್ವರ್ ಮತ್ತು ನೂರಾರು ಕಾರ್ಮಿಕರು, ರೈತರು ಭಾಗವಹಿಸಿದ್ದರು. ಸಭೆಯಲ್ಲಿ ದಸ್ತಗೀರ್, ಕೆ. ಆರ್. ನಾಯಕ್ ಮತ್ತು ಸ್ಥಳೀಯ ಅನೇಕ ಮುಖಂಡರು, ವಿರೋಧಪಕ್ಷದ ನಾಯಕರು ಮಾತನಾಡಿದರು. ○

ಭೂಹೀನರ ಧರಣಿ ಸತ್ಯಾಗ್ರಹ

ಶಿಡ್ಲಘಟ್ಟ ತಾಲ್ಲೂಕು ಕಸಬಾ ಹೋಬಳಿಯ ವರದನಾಯಕನಹಳ್ಳಿಯ ಸರ್ವೆನಂಬರ್ 5 ಮತ್ತು 10ರಲ್ಲಿ ಸಾಕಷ್ಟು ಸರ್ಕಾರಿ ಜಮೀನು ಇದ್ದು ಇದನ್ನು ಭೂಹೀನರಿಗೆ ಮಂಜೂರು ಮಾಡಲು ಕೋರಿ ಸಾಕಷ್ಟು ಅರ್ಜಿಗಳು ಬಂದಿದ್ದವು. ಆದರೆ ಅಧಿಕಾರಿಗಳು ಸರ್ವೆ ನಂಬರ್ 5ರ ಜಮೀನನ್ನು ಏಳೂವರೆ ಎಕರೆ ಜಮೀನು ಹಾಗೂ ನಾಲ್ಕು ಪಂಪುಸೆಟ್ಟುಗಳನ್ನು ಹೊಂದಿರುವ ಶ್ರೀಮಂತ ರೈತನಿಗೆ ಮಂಜೂರು ಮಾಡಿದ್ದರು. ಇದನ್ನು ಪ್ರತಿಭಟಿಸಿ ಭೂಹೀನರು 23-5-80ರಂದು ಮತ್ತೊಂದು ಅರ್ಜಿಯನ್ನು ಕೊಟ್ಟಿದ್ದರು. ರೈತಸಂಘವೂ ಶ್ರೀಮಂತ ರೈತನಿಗೆ ಮಂಜೂರಾದ ಭೂಮಿಯನ್ನು ವಜಾಮಾಡಿ ಭೂಹೀನರಿಗೆ ಹಂಚಲು 29-5-80ರಂದು ಅರ್ಜಿಕೊಟ್ಟಿತ್ತು. ಇದರ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳದೆ ಇರುವುದರಿಂದ 4-8-80ರಿಂದ ಭೂಹೀನರು ಶಿಡ್ಲಘಟ್ಟ ತಾಲ್ಲೂಕು ತಹಸೀಲ್ದಾರರ ಕಚೇರಿ ಮುಂದೆ ಧರಣಿಮಾಡಲು ತೀರ್ಮಾನಿಸಿದ್ದಾರೆ.

ಆಗಸ್ಟ್ ೧೫ರಂದು ರಾಷ್ಟ್ರೀಯ ಐಕ್ಯತಾ ದಿನಾಚರಣೆ

ಅಸ್ಸಾಂ–ತ್ರಿಪುರ ಚಳುವಳಿಯಿಂದ ರಾಷ್ಟ್ರದ ಐಕ್ಯತೆಗೆ ಮತ್ತು ಕಾಂಗ್ರೆಸ್ (ಐ)ನಿಂದ ಪ್ರಜಾಪ್ರಭುತ್ವಕ್ಕೆ ಒದಗಿಬಂದಿರುವ ಅಪಾಯಗಳನ್ನು ವಿದ್ಯಾರ್ಥಿಗಳಿಗೆ ಮತ್ತು ನಾಗರೀಕರಿಗೆ ತಿಳಿಯಪಡಿಸಲು ಆಗಸ್ಟ್ 15ರಂದು ರಾಜ್ಯದಾದ್ಯಂತ 'ರಾಷ್ಟ್ರೀಯ ಐಕ್ಯತಾ ದಿನಾಚರಣೆ'ಯನ್ನು ಆಚರಿಸಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.), ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಕೆ ಡಿ.ವೈ.ಓ), ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎ ಐ.ಎಸ್.ಎಫ್), ಅಖಿಲ ಭಾರತ ಯುವಜನ ಫೆಡರೇಷನ್ (ಎ.ಐ.ವೈ.ಎಫ್.) ಸಂಘಟನೆಗಳು ನಿರ್ಧರಿಸಿವೆ ಜುಲೈ 27ರಂದು ಬೆಂಗಳೂರಿನಲ್ಲಿ ಈ ನಾಲ್ಕು ಸಂಘಟನೆಗಳ ರಾಜ್ಯಸಮಿತಿಯ ಪ್ರತಿನಿಧಿಗಳಾದ ಎಸ್.ಆರ್. ಆರಾಧ್ಯ (ಎಸ್.ಎಫ್.ಐ), ಶ್ರೀರಾಮರೆಡ್ಡಿ (ಕೆ.ಡಿ.ವೈ ಓ) ಮತ್ತು ಶಿವಶಂಕರ್ (ಎ.ಐ.ಎಸ್.ಎಫ್, ಎ.ಐ.ವೈ.ಎಫ್) ರವರು ಸಭೆ ಸೇರಿ ಈ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆಗಸ್ಟ್ 15ರಂದು ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸಭೆ ಮೆರವಣಿಗೆಗಳನ್ನು ನಡೆಸಲು ಸಿದ್ಧತೆ ಮಾಡಲಾಗುತ್ತಿದೆ.

ಆಗಸ್ಟ್ ಏಳರಿಂದ ಇಪ್ಪತ್ತೊಂದರವರೆಗೆ ರಾಷ್ಟ್ರಾದ್ಯಂತ 'ಏಕತಾದಿನ'ವನ್ನು ಆಚರಿಸಲು ಎಸ್. ಎಫ್. ಐ. ಕೇಂದ್ರಸಮಿತಿಯ ಸೆಕ್ರೆಟಾರಿಯೇಟ್ ನೀಡಿದ್ದ ಕರೆಯ ಮೇರೆಗೆ ಕರ್ನಾಟಕದಲ್ಲಿ ಈ ಕಾರ್ಯಕ್ರಮವನ್ನು ಜಂಟಿಯಾಗಿ ನಡೆಸಲು ಎಸ್. ಎಫ್. ಐ. ಮುತುವರ್ಜಿ ವಹಿಸಿದೆ.

"ಸ್ಟೂಡೆಂಟ್ಸ್ ಸ್ಟ್ರಗಲ್" ಬಿಡುಗಡೆ

1979ರ ಫೆಬ್ರವರಿಯಲ್ಲಿ ಪಾಟ್ನದಲ್ಲಿ ಜರುಗಿದ ಎಸ್. ಎಫ್. ಐ ನ ರಾಷ್ಟ್ರ ಸಮ್ಮೇಳನದಲ್ಲಿ ತೆಗೆದುಕೊಂಡ ತೀರ್ಮಾನದ ಪ್ರಕಾರ ಎಸ್.ಎಫ್ ಐ. ಕೇಂದ್ರ ಸಮಿತಿಯು ಸಂಘದ ಮುಖವಾದ 'ಸ್ಟೂಡೆಂಟ್ಸ್ ಸ್ಟ್ರಗಲ್' ಪತ್ರಿಕೆಯನ್ನು ಪುನರಾರಂಭಿಸಿದ್ದು ಆಗಸ್ಟ್ ತಿಂಗಳಿನಲ್ಲಿ ಎಸ್.ಎಫ್ ಐ.ನ ಹತ್ತನೇ ವಾರ್ಷಿಕೋತ್ಸವದ ಸವಿನೆನಪಿಗಾಗಿ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಗುತ್ತದೆ.

ಎಸ್.ಎಫ್.ಐ.ನ ಈ ಮಾಸಿಕ ಪತ್ರಿಕೆಗೆ ಚಂದಾದಾರರಾಗಲು ಎಲ್ಲಾ ಸದಸ್ಯರಲ್ಲೂ ಮತ್ತು ಹಿತೈಷಿಗಳಲ್ಲೂ ವಿನಂತಿಸಲಾಗಿದೆ. ಈಗಾಗಲೇ ಚಂದಾದಾರರಾಗಿರುವವರು ವಿಳಾಸ ಬದಲಿಸಬೇಕಿದ್ದಲ್ಲಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ–

ವಾರ್ಷಿಕ ಚಂದಾ : 6-00ರೂ.
ಅರ್ಧವಾರ್ಷಿಕ ಚಂದಾ : 3-00ರೂ.
ವಿಳಾಸ:– ಎಸ್.ಎಫ್.ಐ. ಆಫೀಸ್, 20, ಜನಪತ್, ನ್ಯೂಡೆಲ್ಲಿ–110001.

ತಪ್ಪುಗಳನ್ನು ಮರೆಮಾಚಲು ಚರಿತ್ರೆಯ ವಿಕೃತಿ

ಹರಿಕಿಷನ್ ಸಿಂಗ್ ಸುರ್ಜಿತ್

ಜುಲೈ 6ರ ನ್ಯೂಏಜ್‌ನಲ್ಲಿ ಭೂಪೇಶ್‌ಗುಪ್ತ ಅವರು ತಮ್ಮ ಲೇಖನ ಬರೆದ ನಂತರ ತುಂಬ ಹಿಂದುಮುಂದು ನೋಡಿಯೇ ನಾವು ಮಾತನಾಡಲು ಆರಂಭಿಸಿದ್ದು. ನಮ್ಮ ದೇಶದಲ್ಲಿ ಬೆಳೆಯುತ್ತಿರುವ ಪರಿಸ್ಥಿತಿಯ ಕಾರಣದಿಂದ ನಾವು ಹಿಂದುಮುಂದು ನೋಡಿದ್ದು.

ಆರ್ಥಿಕ ಬಿಕ್ಕಟ್ಟು ಮತ್ತಷ್ಟು ಆಳವಾಗುತ್ತಿರುವ ಮತ್ತು ಸಾಮಾನ್ಯ ಜನತೆಯ ಮೇಲೆ ಇನ್ನಷ್ಟು ಅಕ್ರಮಗಳು ನಡೆಯುತ್ತಿರುವ ಈ ಸಮಯದಲ್ಲಿ ಸರ್ವಾಧಿಕಾರಿ ಶಕ್ತಿಗಳು ಅಧಿಕಾರಕ್ಕೆ ಬಂದಿವೆ. ಸರ್ವಾಧಿಕಾರಿ ವ್ಯವಸ್ಥೆಯನ್ನು ಮತ್ತೆ ತಂದು ಈ ಬಿಕ್ಕಟ್ಟನ್ನು ಪರಿಹರಿಸಲು ದಾರಿಯೊಂದನ್ನು ಕಂಡುಕೊಳ್ಳಲು ಬೂರ್ಜ್ವಾ-ಭೂಮಾಲೀಕ ಆಳುವ ವರ್ಗಗಳು ಮತ್ತೆ ಪ್ರಯತ್ನಿಸುತ್ತಿವೆ. ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವವಾದಿ ಹಕ್ಕುಗಳು, ಜನತೆಯ ಜೀವನ ಇವುಗಳ ರಕ್ಷಣೆಯಲ್ಲಿ ಆಸಕ್ತಿ ಇರುವವರೆಲ್ಲರೂ, ಸರ್ವಾಧಿಕಾರದತ್ತ ಮುನ್ನುಗ್ಗುತ್ತಿರುವ ಆಳುವ ವರ್ಗಗಳ ಕ್ರಮವನ್ನು ಸೋಲಿಸಲು ದಾರಿಗಳನ್ನು ಹುಡುಕುತ್ತಿದ್ದಾರೆ. ಎಡಪಕ್ಷಗಳ ಐಕ್ಯತೆ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆ ಸರ್ವಾಧಿಕಾರಿ ಶಕ್ತಿಗಳಿಗೆ ವಿಶಾಲ ಪ್ರತಿರೋಧವನ್ನು ರೂಪಿಸುವುದು, ಇವೆಲ್ಲವೂ ಇಂದಿನ ತುರ್ತು ಅಗತ್ಯದ ಕೆಲಸಗಳಾಗಿವೆ.

ಈ ಸಂದರ್ಭದಲ್ಲಿ ಕೆಲವು ಸ್ವಾಗತಾರ್ಹ ಬೆಳವಣಿಗೆಗಳು ಆಗುತ್ತಿವೆ. ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ಸಿಗೆ ಸಹಕಾರ ನೀಡುವ ಮತ್ತು ಅವರ ತುರ್ತು ಆಳ್ವಿಕೆಗೆ ಬೆಂಬಲ ಇವೆಲ್ಲದರ ದೀರ್ಘ ಅವಧಿ ಮುಗಿದ ನಂತರ ಈಗ ಕಮ್ಯುನಿಸ್ಟ್ ಪಕ್ಷವು ಆಳುವಪಕ್ಷದ ವಿರೋಧಿ ನಿಲುವನ್ನು ತಳೆದಿದೆ. ಕಮ್ಯುನಿಸ್ಟ್ ಪಕ್ಷವು ಯಾವಾಗಲೂ ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಗಾಗಿ ಶ್ರಮಿಸಿದೆ ಎಂದು ಭೂಪೇಶ್‌ಗುಪ್ತ ಹೇಳಿಕೊಳ್ಳುವಾಗ ತುರ್ತುಪರಿಸ್ಥಿತಿಯಲ್ಲಿ ಜನತೆಗೆ ಕಿರುಕುಳ ಕೊಡುತ್ತಿದ್ದಾಗ, ಎಲ್ಲ ರಂಗಗಳಲ್ಲಿ ಅವರ ದಮನ ಮಾಡುತ್ತಿದ್ದಾಗ ಕಮ್ಯುನಿಸ್ಟ್ ಪಕ್ಷವು ತಾನು ಮತ್ತು ತನ್ನ ಸಂಘಟನೆಗಳು ಒಪ್ಪಿಕೊಂಡಿರುವ ಹಾಗೆ ಎಲ್ಲ ಪಕ್ಷಗಳೂ ಇಂದಿರಾಗಾಂಧಿಯ 20 ಅಂಶಗಳ ಕಾರ್ಯಕ್ರಮವನ್ನು ಒಪ್ಪದೇ ಹೋದಲ್ಲಿ ಜನತೆಯ ರಕ್ಷಣೆಗಾಗಿ ಸಾಮೂಹಿಕ ಸಂಘಟನೆಗಳೂ ನಡೆಸುವ ಐಕ್ಯಕಾರ್ಯಾಚರಣೆಯಲ್ಲಿ ಸೇರುವುದಿಲ್ಲ ಎಂದು ಹೇಳಿದ್ದನ್ನು ಮರೆತಿರಲಿಕ್ಕಿಲ್ಲ.

ಆದರೆ ಕಮ್ಯುನಿಸ್ಟ್ ಪಕ್ಷವು ಆಳುವ ಪಕ್ಷಕ್ಕೆದುರಾಗಿ ತಳೆದಿರುವ ವಿರೋಧಿ ನಿಲುವು ತುಂಬ ಸ್ವಾಗತಾರ್ಹವಾದ ಬೆಳವಣಿಗೆ, ಏಕೆಂದರೆ ಅದು ಎಡಶಕ್ತಿ ಐಕ್ಯತೆಗೆ ಸಹಾಯ ಮಾಡುತ್ತದೆ. ಒಮ್ಮೆ ಹೀಗೆಯೇ ನಡೆದಿತ್ತು. ಅದರ ಜೊತೆಗೆ 1969ರ ಮಾರ್ಕ್ಸ್‌ವಾದಿ ವಿರೋಧಿರಂಗ ಕೇರಳದಲ್ಲಿ ಒಡೆದು, ಸಿ. ಪಿ. ಐ. (ಎಂ) ಮತ್ತು ಸಿ.ಪಿ.ಐ.ಗಳು ಮತ್ತಿತರ ಎಡ ಪಕ್ಷಗಳು ಒಟ್ಟಾಗಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಚುನಾವಣೆಗಳನ್ನು ಎದುರಿಸಿ, ಜನತೆಯ ರಕ್ಷಣೆಗಾಗಿ ಐಕ್ಯ ಕಾರ್ಯಾಚರಣೆಗಳನ್ನು ಯೋಚಿಸುವುದು ಸಾಧ್ಯವಾದಿತ್ತು. ಇವೆಲ್ಲವೂ ಎಡ ಶಕ್ತಿಗಳ ಐಕ್ಯತೆಯನ್ನು ಬಲಪಡಿಸುವುದರಲ್ಲಿ ಸಹಾಯಮಾಡುತ್ತವೆ. ಅದನ್ನು ದೃಢೀಕರಿಸಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ಕಟ್ಟುವ ಮತ್ತು ಸರ್ವಾಧಿಕಾರಿ ವಿರೋಧಿ ಶಕ್ತಿಗಳನ್ನು ಬಲಪಡಿಸುವ ಕಾರ್ಯ ಆಗಬೇಕಾಗಿದೆ.

ಈ ಆಲೋಚನೆಯಿಂದಲೇ ನಾವು, ಕಮ್ಯುನಿಸ್ಟ್ ಪಕ್ಷದ ನಾಯಕರು ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಿದಾಗಲೂ ಅವರ ಜೊತೆ ವಿವಾದಕ್ಕಿಳಿದಿರಲಿಲ್ಲ. ಇತ್ತೀಚಿನ ಎರಡು ಘಟನೆಗಳನ್ನು ನಾವು ಉದಾಹರಿಸಬಹುದು. ಲೆನಿನ್ನರ 110ನೇ ಜನ್ಮದಿನೋತ್ಸವದಲ್ಲಿ ಮಾತನಾಡುತ್ತಾ ಸಿ. ಪಿ. ಐ. ಸೆಕ್ರೆಟೇರಿಯಟ್ ಸದಸ್ಯ ಎನ್. ಕೆ. ಕೃಷ್ಣನ್ ಅವರು, 1964ರಲ್ಲಿ ಒಡಕು ಉಂಟಾದದ್ದು "ಮಾವೋವಾದದ" ದೆಸೆಯಿಂದ ಮತ್ತು ಈ ಪ್ರಶ್ನೆಯ ಬಗ್ಗೆ ಅವರ ಪಕ್ಷದ ನಿಲುವನ್ನು ನಂತರದ ಬೆಳವಣಿಗೆಗಳು ಸಮರ್ಥಿಸಿವೆ ಎಂದು ಹೇಳಿದ್ದಾರೆ. (ಪೇಟ್ರಿಯಟ್ ಏಪ್ರಿಲ್ 26,1980). ಸಿ. ಪಿ. ಐ. ನ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಫರೂಕಿ ಅವರು ಪಾರ್ಟಿಲೈಫ್‌ನಲ್ಲಿ ಬರೆಯುತ್ತಾ "ರಾಜಕೀಯ ಭಿನ್ನಾಭಿಪ್ರಾಯಗಳ ಹೆಸರಿನಲ್ಲಿ ಪ್ರಜಾಪ್ರಭುತ್ವವಾದಿ ಕೇಂದ್ರವಾದವನ್ನು ಅಲ್ಲಗಳೆಯಲು ಕೆಲವು ಕಾಮ್ರೇಡ್‌ಗಳು ಆರಂಭಿಸಿದರು... ಕೊನೆಗೆ ಏನಾಯಿತೆಂಬುದು ಗೊತ್ತೇ ಇದೆ. ಈ ಕಾಮ್ರೇಡುಗಳು ಪಕ್ಷವನ್ನು ಒಡೆದರು..." ಎಂದಿದ್ದಾರೆ. ಆದರೆ ಇಂಥವುಗಳ ಬಗ್ಗೆ ಉತ್ತರಿಸಲು ನಾವು ಹೋಗಲಿಲ್ಲ. ಏಕೆಂದರೆ ಇದಕ್ಕಿಂಥ ಹೆಚ್ಚಿನದು ನಮ್ಮ ಆಲೋಚನೆಯಲ್ಲಿ ಇತ್ತು. ಆದರೆ ಭೂಪೇಶ್‌ಗುಪ್ತ ಈ ವಿಕೃತಿಗಳೆಲ್ಲವನ್ನೂ ಕೂಡಿಸಿ ನ್ಯೂಏಜ್‌ನಲ್ಲಿ ಲೇಖನ ಬರೆದಾಗ, ಜುಲೈ 13ರ ಪೀಪಲ್ಸ್ ಡೆಮಾಕ್ರಸಿಯಲ್ಲಿ ಇದಕ್ಕೆ ಉತ್ತರಿಸದೆ ನಮಗೆ ಬೇರೆದಾರಿ ಇರಲಿಲ್ಲ. ಭೂಪೇಶ್‌ಗುಪ್ತರು ಮತ್ತೊಮ್ಮೆ ಇತಿಹಾಸವನ್ನು ವಿಕೃತಿಗೊಳಿಸಿ ಲೇಖನ ಬರೆದಿದ್ದಾರೆ. (ನ್ಯೂಏಜ್ ಜುಲೈ 20), ವಿಷಾದದಿಂದ ನಾವು ದಾಖಲೆಗಳನ್ನು ಸರಿಪಡಿಸಬೇಕಾಗಿದೆ. ಈ ಕಾರಣಕ್ಕಾಗಿ ನಾವು ಭೂಪೇಶ್‌ಗುಪ್ತರ ಲೇಖನದಿಂದ ಕೆಲವು ಅಂಶಗಳನ್ನು ಮಾತ್ರ ಎತ್ತಿಕೊಂಡಿದ್ದೇವೆ.

ಮೊದಲನೆಯದಾಗಿ ಪಕ್ಷದ ನೀತಿಯ ಬಗ್ಗೆ ಹೇಳಬೇಕು. "ನಮ್ಮ ದೇಶದ ಕಮ್ಯುನಿಸ್ಟ್ ಚಳುವಳಿ ಮತ್ತು ಕಮ್ಯುನಿಸ್ಟ್ ಪಕ್ಷವನ್ನು ಒಡೆಯುವುದರಲ್ಲಿ ಮಾವೋವಾದಿ ನಾಯಕರ ಚಟುವಟಿಕೆಗಳ ಬಗ್ಗೆ ಹೇಳುವಾಗ ಒಡಕಿಗೆ ಕಾರಣವಾದ ಯಾವುದೇ ಆಂತರಿಕ ಕಾರಣಗಳ ಬಗ್ಗೆ ನಾವೇನೂ ಹೇಳಲಿಲ್ಲ" ಎಂದು ಭೂಪೇಶ್‌ಗುಪ್ತ ಈಗ ಬರೆದಿದ್ದಾರೆ. ಕಮ್ಯುನಿಸ್ಟ್ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳಿದ್ದವು, ಮತ್ತು ಅವು "ಪಕ್ಷದ ಮಧುರೈ, ಪಾಲ್‌ಘಾಟ್ ಮತ್ತು ವಿಜಯವಾಡ (1961) ದ ಅಧಿವೇಶನಗಳಲ್ಲಿ ಎದ್ದು ಕಂಡವು" ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಆದರೆ ಒಂದು ಪಕ್ಷದ ಒಡಕನ್ನು ಪಕ್ಷದೊಳಗಿನ ತೀವ್ರ ಭಿನ್ನಾಭಿಪ್ರಾಯಗಳನ್ನು ಹೇಳದೆ ಚರ್ಚಿಸುವ ವಿಚಾರವು ಯಾವುದೇ ಕಮ್ಯುನಿಸ್ಟ್ ಪಕ್ಷದ ನಾಯಕರೊಬ್ಬರಿಂದ ಬಂದದ್ದು ಆಶ್ಚರ್ಯಕರವಾದದ್ದೇ.

ಐಕ್ಯ ಕಮ್ಯುನಿಸ್ಟ್ ಪಕ್ಷದಲ್ಲಿದ್ದ ಭಿನ್ನಾಭಿಪ್ರಾಯಗಳು ಯಾವುವು? ಅವು ತೀವ್ರವಾದದ್ದು, ಕಾರ್ಯಕ್ರಮಾತ್ಮಕವಾದದ್ದು, ಇಂಡಿಯಾ-ಚೀನ ಯುದ್ಧಕ್ಕೆ ಸುಮಾರು ಒಂದೂವರೆ ವರ್ಷಗಳ ಹಿಂದೆಯೇ 1961ರಲ್ಲಿ ವಿಜಯವಾಡದಲ್ಲಿ ಒಡಕು ತಲೆದೋರಿತ್ತು. ಅದನ್ನು 1964ರಲ್ಲಿ ಪ್ರಕಟಗೊಳಿಸಲಾಯಿತಷ್ಟೆ.

ಮುಂದೆ ಸ್ಪಷ್ಟವಾದ ಹಾಗೆ, ಕಾರ್ಯಕ್ರಮಾತ್ಮಕ ಭಿನ್ನಾಭಿಪ್ರಾಯಗಳೆಂದರೆ, ಭಾರತ ದೇಶವು ದೊಡ್ಡ ಬೂರ್ಜ್ವಾ ವರ್ಗದ ನಾಯಕತ್ವದಲ್ಲಿರುವ ಮತ್ತು ವಿದೇಶಿ ಗುತ್ತೇದಾರಿ ಬಂಡವಾಳದೊಡನೆ ಹೆಚ್ಚು ಹೆಚ್ಚು ಸಹಕರಿಸುತ್ತಿರುವ ಒಂದು ಬೂರ್ಜ್ವಾ-ಭೂಮಾಲೀಕ ದೇಶವೋ ಅಥವಾ ಬಂಡವಾಳಶಾಹಿ ಅಲ್ಲದ ದಾರಿಯನ್ನು ತುಳಿಯುತ್ತಿರುವ ಮತ್ತು ಸಾಮ್ರಾಜ್ಯಶಾಹಿಯನ್ನು ವಿರೋಧಿಸುತ್ತಿರುವ ಒಂದು ರಾಷ್ಟ್ರೀಯ ಬೂರ್ಜ್ವಾ ದೇಶವೋ ಎಂಬುದರಲ್ಲಿದ್ದ ವಿವಾದ; ಕಮ್ಯುನಿಸ್ಟ್ ಪಕ್ಷವು ಕಾರ್ಮಿಕ ವರ್ಗದ ನಾಯಕತ್ವದಲ್ಲಿ ನಡೆಯುವ ಜನತೆಯ ಪ್ರಜಾಪ್ರಭುತ್ವವಾದಿ ರಂಗ ಮತ್ತು ಜನತೆಯ ಪ್ರಜಾಪ್ರಭುತ್ವವಾದಿ ಕ್ರಾಂತಿಗೆ ದುಡಿಯಬೇಕೋ ಅಥವಾ ಬೂರ್ಜ್ವಾವರ್ಗದ ಅಧಿಪತ್ಯವನ್ನೇ ಕೊನೆಗೆ ಸೂಚಿಸುವ ಹಾಗೆ, ಬೂರ್ಜ್ವಾವರ್ಗ ಮತ್ತು ಕಾರ್ಮಿಕ ವರ್ಗಗಳ ಜಂಟಿ ಆಧಿಪತ್ಯದಲ್ಲಿ ನಡೆಯುವ ರಾಷ್ಟ್ರೀಯ ಪ್ರಜಾಪ್ರಭುತ್ವವಾದಿ ರಂಗ ಮತ್ತು ರಾಷ್ಟ್ರೀಯ ಪ್ರಜಾಪ್ರಭುತ್ವವಾದಿ ಕ್ರಾಂತಿಗಳಿಗೆ ಶ್ರಮಿಸಬೇಕೋ ಎಂಬ ಭಿನ್ನಾಭಿಪ್ರಾಯ. (ಭೂಪೇಶ್‌ಗುಪ್ತ ಇದನ್ನು ಅಲ್ಲಗಳೆಯುವುದಕ್ಕೆ ಮುಂಚೆ, ಅವರ ಕೇಂದ್ರ ಕಾರ್ಯಕಾರಿ ಸಮಿತಿಯ ಸಹವರ್ತಿಗಳು ಪಾರ್ಟಿಲೈಫ್‌ನಲ್ಲಿ, ತುರ್ತುಪರಿಸ್ಥಿತಿಯಲ್ಲಿ ಬರೆದಿರುವ ಇಂದಿರಾ ನಾಯಕತ್ವದಲ್ಲಿ ಭಾರತದಲ್ಲಿ ಸಮಾಜವಾದ ಕಟ್ಟಬಹುದೆನ್ನುವ ಲೇಖನಗಳನ್ನು ಒಮ್ಮೆ ಓದಬೇಕೆಂದು ನಾವು ನೆನಪಿಸುತ್ತೇವೆ)

ಕಾರ್ಯಕ್ರಮಾತ್ಮಕ ಭಿನ್ನಾಭಿಪ್ರಾಯಗಳ ಬಗ್ಗೆ ಮತ್ತೆ ಹೇಳುವುದಾದರೆ, ನಮಗೆ, ಪಕ್ಷದ ಕಾರ್ಯಕ್ರಮವೇ ತುಂಬ ಮುಖ್ಯವಾದದ್ದು. ಏಕೆಂದರೆ, ನಮ್ಮ ದೇಶದ ಪರಿಸ್ಥಿತಿಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಅನ್ವಯ ಅದೇ. ಭೂಪೇಶ್‌ಗುಪ್ತರಿಗೆ ಅದೊಂದು ಸಣ್ಣ ವಿಚಾರ. ಆದ್ದರಿಂದಲೇ ನಮ್ಮ ಮೊದಲನೇ ಲೇಖನದಲ್ಲಿ ಅವರು ಅದನ್ನು ಹೆಸರಿಸಲೂ ಇಲ್ಲ.

ಕಾರ್ಯದಲ್ಲೂ ಕೂಡ ನಾವು ಕಂಡಂತೆ ಅದು ಅವರಿಗೆ ಒಂದು ಸಣ್ಣ ವಿಚಾರವೇ, ಪಕ್ಷದ ವಿಜಯವಾಡ ಅಧಿವೇಶನದಲ್ಲಿ, ಜನತೆಯ ಪ್ರಜಾಪ್ರಭುತ್ವವಾದಿ ರಂಗ ಮತ್ತು ಜನತೆಯ ಪ್ರಜಾಪ್ರಭುತ್ವವಾದಿ ಕ್ರಾಂತಿಯ ಕಾರ್ಯಕ್ರಮಕ್ಕೆ ಅವರು ಸಹಿ ಹಾಕಿದ್ದರು. ಅಧಿವೇಶನದಲ್ಲಿ ಇನ್ನೊಂದು ಕಾರ್ಯಕ್ರಮವೂ ಇತ್ತು ಮತ್ತು ಅದರ ಬಗ್ಗೆ ಚರ್ಚೆಯನ್ನು ಮುಂದಕ್ಕೆ ಹಾಕಲಾಯಿತು. ಸ್ವಲ್ಪ ಸಮಯದಲ್ಲೇ ಭೂಪೇಶ್‌ಗುಪ್ತ ಅವರು ರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಬೂರ್ಜ್ವಾ ಮತ್ತು ಕಾರ್ಮಿಕ ವರ್ಗಗಳ ಜಂಟಿ ಅಧಿಪತ್ಯದ ರಾಷ್ಟ್ರೀಯ ಪ್ರಜಾಪ್ರಭುತ್ವವಾದಿ ರಂಗದ ಪಕ್ಷದ ಕಾರ್ಯಕ್ರಮಕ್ಕೆ ಸಹಿಹಾಕಿದರು. ಪಕ್ಷದ ಕಾರ್ಯಕ್ರಮಕ್ಕೆ ಭೂಪೇಶ್‌ಗುಪ್ತ ಕೊಡುವ ಬೆಲೆ ಇಷ್ಟೇ. ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಅವರು ನೀಡುವ ಗೌರವ ಇದೇ!

ಎರಡು ಕಾರ್ಯಕ್ರಮಾತ್ಮಕ ನಿಲುವುಗಳಿಂದ ಎರಡು ರಾಜಕೀಯ ನೀತಿಗಳೂ ವಿಜಯವಾಡ ಪಕ್ಷದ ಅಧಿವೇಶನದ ಮುಂದಿತ್ತು. ಆಳುವ ವರ್ಗಗಳ ಸರ್ಕಾರಕ್ಕೆ ನಿರಂತರ ಕ್ರಾಂತಿಕಾರಿ ವಿರೋಧ ಒಂದು, ಸರ್ಕಾರ ಮತ್ತು ಆಳುವ ಪಕ್ಷದೊಡನೆ ಸಹಕಾರದ ನೀತಿ ಇನ್ನೊಂದು. ಪಕ್ಷದ ಒಡಕಿನ ಬಗ್ಗೆ ಚರ್ಚಿಸುವಾಗ ಭೂಪೇಶ್‌ಗುಪ್ತರು ಮಾಡಿರುವ ಹಾಗೆ, ಇದೂ ಕೂಡ ಬಿಟ್ಟುಬಿಡತಕ್ಕ ಸಣ್ಣ ವಿಚಾರವೇನಲ್ಲ. ಅವರು ಇದನ್ನು ಬಿಟ್ಟುಬಿಡುವುದಕ್ಕೆ ಕಾರಣ ಇದೆ. ಏಕೆಂದರೆ ಈ ಎರಡು ನೀತಿಗಳ ಪರಿಣಾಮಗಳು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆಯಲ್ಲ.

ಚೀನದ ಕಮ್ಯುನಿಸ್ಟ್ ಪಕ್ಷವು 1963ರ ಜೂನ್‌ನಲ್ಲಿ ಮುಂದಿಟ್ಟಿದ್ದ ಸಾಮಾನ್ಯ ನೀತಿ ಮತ್ತು ನಾವು ಅದಕ್ಕೆ ನೀಡಿದ ಬೆಂಬಲದ ಬಗ್ಗೆಯೂ ಭೂಪೇಶ್‌ಗುಪ್ತ ಉಲ್ಲೇಖಿಸಿದ್ದಾರೆ. ಆ ಅವಧಿಯಲ್ಲಿ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯೊಳಗಿದ್ದ ಸೈದ್ಧಾಂತಿಕ ವಿವಾದಗಳು ಮತ್ತು ಭಾರತೀಯ ಕಮ್ಯುನಿಸ್ಟ್ ಚಳುವಳಿಯಲ್ಲಿದ್ದ ಆಂತರಿಕ ಭಿನ್ನಾಭಿಪ್ರಾಯಗಳಿಂದ ಇದನ್ನು ಬೇರ್ಪಡಿಸಲು ಸಾಧ್ಯವೇ?

ಯಾವ ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯಗಳು ಬಂದವು? ಶಾಂತಿಯುತ ಸಹಬಾಳ್ವೆ, ಶಾಂತಿಯುತ ಸ್ಪರ್ಧೆ, ಶಾಂತಿಯುತ ಪರಿವರ್ತನೆ ಮತ್ತು ರಾಷ್ಟ್ರೀಯ ಪ್ರಜಾಪ್ರಭುತ್ವ. ಈ ಎಲ್ಲದರ ಬಗ್ಗೆ ಒಂದು ಪರಿಷ್ಕರಣವಾದಿ ತಿಳುವಳಿಕೆ ಇತ್ತು, ಅದನ್ನು ಪ್ರಶ್ನಿಸಲಾಯಿತು. ವಿಭಿನ್ನ ಸಾಮಾಜಿಕ ವ್ಯವಸ್ಥೆಗಳ ಶಾಂತಿಯುತ ಸಹಬಾಳ್ವೆ ಎಂಬ ಲೆನಿನ್ನರ ಕ್ರಾಂತಿಕಾರಿ ಕಲ್ಪನೆಯು, ಸಮಾಜವಾದ ಮತ್ತು ಸಾಮ್ರಾಜ್ಯವಾದಗಳ ನಡುವೆ ವಿಶ್ವಮಟ್ಟದಲ್ಲಿ ವರ್ಗ ಹೋರಾಟವನ್ನು ಮುಳುಗಿಸುವುದು, ಪ್ರತಿದೇಶದಲ್ಲೂ ಕಾರ್ಮಿಕ ಮತ್ತು ಆಳುವ ವರ್ಗಗಳ ನಡುವೆ ಅದನ್ನು ಹುದುಗಿಸುವುದು ಎಂದು ಅರ್ಥವೆ? ವಿವಿಧ ದೇಶಗಳ ಕಮ್ಯುನಿಸ್ಟ್ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿಗಳನ್ನು ದಮನಮಾಡಿ ಆದೇಶಗಳ ಆಳುವ ವರ್ಗಗಳಿಗೆ ಸಮಾಜವಾದಿ ಶಿಬಿರವು ನೀಡುವ ಬೆಂಬಲ ಎಂದು ಇದರ ಅರ್ಥವೆ? ಶಾಂತಿಯುತ ಸ್ಪರ್ಧೆ ಎಂದರೆ, ಶಾಂತಿಯುತ ವಿಶ್ವ ಆರ್ಥಿಕ ಸ್ಪರ್ಧೆಯನ್ನು ಸಾಮ್ರಾಜ್ಯಶಾಹಿಯೊಡನೆ ಸೋವಿಯೆತ್ ಒಕ್ಕೂಟ ನಡೆಸುವುದು ಮತ್ತು ಅದನ್ನು ನಾಶಮಾಡಿ, ವಿಶ್ವವು ತನಗೆ ತಾನೇ ವಿಮೋಚನೆಯಾಗುವುದು ಎಂದು ಅರ್ಥವೆ? ಶಾಂತಿಯುತ ಪರಿವರ್ತನೆ ಎಂದರೆ, ಪ್ರತಿಯೊಂದು ಕಮ್ಯುನಿಸ್ಟ್ ಪಕ್ಷವೂ ಸಮಾಜವಾದಕ್ಕೆ ಪರಿವರ್ತನೆಯಾಗುವುದಕ್ಕೆ ಸಂಸತ್ತಿನ ದಾರಿಯನ್ನು ಹಿಡಿಯಬೇಕು ಎಂದು ಅರ್ಥವೆ? ರಾಷ್ಟ್ರೀಯ ಪ್ರಜಾಪ್ರಭುತ್ವವಾದ ಎಂದರೆ, ಹೊಸದಾದಿ ಸ್ವತಂತ್ರವಾದ ಎಲ್ಲ ದೇಶಗಳಲ್ಲೂ ಕಮ್ಯುನಿಸ್ಟ್ ಪಕ್ಷಗಳು, ಬಂಡವಾಳಶಾಹಿ ಅಲ್ಲದ ದಾರಿಯನ್ನು ಅನುಸರಿಸಲು ಆ ದೇಶಗಳ ಆಳುವವರ್ಗಗಳ ಜೊತೆ ಸಹಕರಿಸುವುದು ಮತ್ತು ಕಾಲಕ್ರಮೇಣ ಅದನ್ನು ಶಾಂತಿಯುತವಾಗಿ ಸಮಾಜವಾದಿ ಪಥಕ್ಕೆ ಬದಲಿಸುವುದು ಎಂದು ಅರ್ಥವೆ?

ಇದ್ದದ್ದು ಈ ವಿಚಾರಗಳು. ನಮ್ಮ ಪಕ್ಷದಲ್ಲಿ 1954-55ರಿಂದಲೂ ನಡೆ

ಯುತ್ತಿದ್ದ ಚರ್ಚೆಗಳಿಗೆ ಇವು ತುಂಬ ಮಟ್ಟಿಗೆ ಸಂಬಂಧಿಸಿದವು. ಹಿಂದೆ ಸೂಚಿಸಿದ ಹಾಗೆ ಇವು ಎರಡು ನೀತಿಗಳಿಗೂ ತುಂಬ ಸಂಬಂಧಿಸಿದ್ದವು- ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಜನತೆಯ ಪ್ರಜಾಪ್ರಭುತ್ವವಾದಿ ಕ್ರಾಂತಿಯ ನೀತಿ, ಮತ್ತು ಬಂಡವಾಳಶಾಹಿ ವರ್ಗ-ಕಾರ್ಮಿಕ ವರ್ಗಗಳ ಜಂಟಿ ಆಧಿಪತ್ಯದ ರಾಷ್ಟ್ರೀಯ ಪ್ರಜಾಪ್ರಭುತ್ವದ ನೀತಿ; ಸಾಮಾಜಿಕ ಪರಿವರ್ತನೆಗಾಗಿ ಕ್ರಾಂತಿಕಾರಿ ವಿರೋಧ ಮತ್ತು ಕ್ರಾಂತಿಕಾರಿ ಹೋರಾಟದ ನೀತಿ ಮತ್ತು ಶಾಂತಿಯುತ ಪರಿವರ್ತನೆಗಾಗಿ ಕಾಂಗ್ರೆಸ್ಸಿನೊಡನೆ ಮೈತ್ರಿ ಸರ್ಕಾರ, ವರ್ಗಸಹಕಾರ ಮತ್ತು ಸಂಸತ್ತಿನ ಮಾರ್ಗಗಳ ನೀತಿ-ಇಂಥ ಎರಡು ನೀತಿಗಳ ಬಗ್ಗೆ ಚರ್ಚೆ ಆಗುತ್ತಿದ್ದವು.

ಈ ಪ್ರಶ್ನೆಗಳ ಬಗ್ಗೆ ಚೀನದ ಕಮ್ಯುನಿಸ್ಟ್ ಪಕ್ಷ ತಳೆಯುತ್ತಿದ್ದ ನಿಲುವುಗಳೂ ನಮ್ಮ ನಿಲುವುಗಳೂ ಹೆಚ್ಚು ಕಡಿಮೆ ಒಂದೇ ಆಗಿರುತ್ತಿದ್ದವು. ನಮ್ಮದಷ್ಟೇ ಅಲ್ಲ, ಶ್ರೀಲಂಕಾದ ಪಕ್ಷವೊಂದನ್ನು ಬಿಟ್ಟರೆ, ಏಷ್ಯದ ಪ್ರತಿಯೊಂದು ಕಮ್ಯುನಿಸ್ಟ್ ಪಕ್ಷವೂ, ವಿಯೆಟ್‌ನಾಮಿನ ಕಮ್ಯುನಿಸ್ಟ್ ಪಕ್ಷವೂ ಕೂಡ ಇದೇ ನೀತಿಯನ್ನು ಬೆಂಬಲಿಸಿತ್ತು. ಮಾಸ್ಕೋದ 81 ಪಕ್ಷಗಳ ಅಧಿವೇಶನಕ್ಕಾಗಿ ಪಕ್ಷದ ನಿಯೋಗ ಹೊರಡುವುದಕ್ಕೆ ಮುನ್ನ 1960ರ ಸೆಪ್ಟೆಂಬರಿನಲ್ಲಿ ನಡೆದ ಭಾರತದ ಐಕ್ಯ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯಲ್ಲಿಯೂ ಸಹ ಈ ನೀತಿಯು ಒಂದೇ ಒಂದು ಮತದಲ್ಲಿ ಸೋಲಿಸಲ್ಪಟ್ಟಿತು.

ಅಂದಿನಿಂದಲೂ ಈ ವಿಚಾರಗಳ ಬಗ್ಗೆ ನಮ್ಮ ನಿಲುವುಗಳನ್ನು ನಾವು ಒಂದಿಷ್ಟೂ ಬದಲಾಯಿಸಿಲ್ಲ. ವಿವಿಧ ಹಂತಗಳಲ್ಲಿ ನಮ್ಮ ಕಾರ್ಯಕ್ರಮ, ನಮ್ಮ ತಾಂತ್ರಿಕನೀತಿ ಇವುಗಳನ್ನು ಪರಿಶೀಲಿಸಿ, ಆದರೆ ಚೀನದ ಕಮ್ಯುನಿಸ್ಟ್ ಪಕ್ಷ ತಾನು ಹೇಳಿದ್ದ ನಿಲುವುಗಳಿಂದ ದೂರಸರಿಯಲಾರಂಭಿಸಿದಾಗ 1965 ರಿಂದಲೂ ಅದನ್ನು ಟೀಕಿಸಲು ನಾವು ಹಿಂಜರಿಯಲಿಲ್ಲ. ವಿಯೆಟ್‌ನಾಮ್ ಅನ್ನು ಬೆಂಬಲಿಸುವ ಐಕ್ಯಕಾರ್ಯಾಚರಣೆ ಪ್ರಶ್ನೆಯ ಬಗ್ಗೆ ನಮ್ಮ ದಾಖಲೆಯಲ್ಲಿ ಇವತ್ತಿನವರೆಗೂ ನಮ್ಮ ವಿಮರ್ಶೆಯಲ್ಲಿ ನಾವು ಚೀನದ ಕಮ್ಯುನಿಸ್ಟ್ ಪಕ್ಷದ ತಪ್ಪು ನಿಲುವುಗಳನ್ನು ಟೀಕಿಸಿದ್ದೇವೆ. ಈ ಬಗ್ಗೆ ಸಮಾಧಾನ ಪಡೆಯಲು ಭೂಪೇಶ್‌ಗುಪ್ತ ಅವರು ಪೀಪಲ್ಸ್ ಡೆಮಾಕ್ರಸಿಯ ಫೈಲುಗಳು ಮತ್ತು ನಮ್ಮ ಪ್ರಕಟಣೆಗಳನ್ನು ಪರಿಶೀಲಿಸಬಹುದು.

ಆದರೆ ಒಂದು ತೀವ್ರ ವ್ಯತ್ಯಾಸ ಇದೆ. ಚೀನದ ಕಮ್ಯುನಿಸ್ಟ್ ಪಕ್ಷದ ಮೇಲಿನ ನಮ್ಮ ವಿಮರ್ಶೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಆಧರಿಸಿದೆ. ಭೂಪೇಶ್‌ಗುಪ್ತ ಚೀನವನ್ನು ಬೈಯುವಾಗ, ಬಹಳ ಹಿಂದಿನಿಂದಲೂ ಸಿ ಪಿ ಐ ಅಪ್ಪಿಕೊಂಡಿರುವ ಬಂಡವಾಳಶಾಹಿ ರಾಷ್ಟ್ರೀಯವಾದದಿಂದ ಅವರಿಗೆ ಹೊರಬರಲಾಗುವುದಿಲ್ಲ.

ಬಂಡವಾಳಶಾಹಿ ರಾಷ್ಟ್ರೀಯವಾದದಿಂದ ಬಂದಿರುವ ಈ ದ್ವೇಷವನ್ನು ಭೂಪೇಶ್‌ಗುಪ್ತ ಚೀನದೊಳಗಡೆ ಈಗ ನಡೆಯುತ್ತಿರುವ ಆಂತರಿಕ ಬದಲಾವಣೆಗಳ ವಿಚಾರಕ್ಕೂ ಒಯ್ಯುತ್ತಾರೆ

ಕಳೆದ ಎರಡು ದಶಕಗಳ ಸೈದ್ಧಾಂತಿಕ ನಿಲುವುಗಳು ಮತ್ತು ನೀತಿಗಳನ್ನು ಚೀನದ ಕಮ್ಯುನಿಸ್ಟ್ ಪಕ್ಷ ತೀವ್ರವಾದಿ ಮರುಪರೀಕ್ಷೆಗೆ ಒಳಪಡಿಸುತ್ತಿದೆ. ಸಾಂಸ್ಕೃತಿಕ ಕ್ರಾಂತಿ ಮತ್ತು ಇತರ ಆಂತರಿಕ ನೀತಿಗಳನ್ನು ಅವರು ತಿರಸ್ಕರಿಸಿದ್ದಾರೆ ನಾವು ಇದನ್ನು ಸ್ವಾಗತಿಸಿದ್ದೇವೆ ಮತ್ತು ಈ ಮರುಪರೀಕ್ಷೆ ಮತ್ತು ನಿರಾಕರಣೆಗಳು ಇನ್ನಷ್ಟು ಆಗಬೇಕೆಂದು ಹೇಳುತ್ತಿದ್ದೇವೆ.

ಆದರೆ ಭೂಪೇಶ್‌ಗುಪ್ತರಿಗೆ ಇವೆಲ್ಲವೂ "ಚೀನದ ಆರ್ಥಿಕತೆಯನ್ನು ಮತ್ತು ರಾಷ್ಟ್ರೀಯ ಜೀವನವನ್ನು ಬಂಡವಾಳಶಾಹಿ ಪಶ್ಚಿಮ ಮತ್ತು ಜಪಾನಿನ ಸಹಕಾರದೊಡನೆ ಮಿಲಿಟರೀಕರಣಗೊಳಿಸುವುದಕ್ಕೆ ನಡೆಯುತ್ತಿರುವುದು. ದೇಶದ ಸಮಾಜವಾದಿ ಆರ್ಥಿಕ ತಳಹದಿಯನ್ನು ನಾಶಮಾಡುವ ದುಷ್ಟ ಬಹುದೇಶೀಯಗಳ ಸಹಕಾರವನ್ನೂ ಅದು ಬಯಸಿದೆ".

ನಾವು ಮತ್ತೆ ಹೇಳಿರುವ ಹಾಗೆ, ಜಗತ್ತಿನ ಬೆಳವಣಿಗೆಗಳ ಬಗ್ಗೆ ನಮ್ಮ ನಿಲುವುಗಳನ್ನು ನಾವು ಸಾಮ್ರಾಜ್ಯಶಾಹಿ ವಿರೋಧದ ಆಧಾರದ ಮೇಲೆ ತೆಗೆದುಕೊಳ್ಳುತ್ತೇವೆ ನಾವು ಅಮೆರಿಕ ಸಾಮ್ರಾಜ್ಯಶಾಹಿಯನ್ನು ಜಗತ್ತಿನ ಅತಿದುಷ್ಟ ಮತ್ತು ಮುಖ್ಯ ಶತ್ರು ಎಂದು ಭಾವಿಸುತ್ತೇವೆ. ಈ ಹೋರಾಟದೊಡನೆ ರಾಜಿಮಾಡಿಕೊಳ್ಳುವವರೆಲ್ಲರನ್ನೂ ನಾವು ಟೀಕಿಸುತ್ತೇವೆ.

ಸಾಮ್ರಾಜ್ಯಶಾಹಿ ವಿರೋಧದ ಆಧಾರದ ಮೇಲೆ ನಾವು ನಮ್ಮ ನಿಲುವುಗಳನ್ನು ನಿರ್ಧರಿಸುವುದರಿಂದ ಮಾರ್ಕ್ಸ್‌ವಾದ-ಲೆನಿನ್‌ವಾದ, ಕಾರ್ಮಿಕ ಅಂತರರಾಷ್ಟ್ರೀಯತೆಗಳೇ ನಮಗೆ ಮಾರ್ಗದರ್ಶನ ನೀಡುವುದರಿಂದ, ಜೆಕೊಸ್ಲೋವಾಕಿಯದಂಥ ವಿಚಾರದಲ್ಲಿ, ಸಮಾಜವಾದದ ಹಿತಾಸಕ್ತಿಗಾಗಿ ಸಾಮ್ರಾಜ್ಯಶಾಹಿ ವಿರೋಧದ ಹೋರಾಟದ ಹಿತಾಸಕ್ತಿಗಾಗಿ ಸೋವಿಯೆತ್ ಪ್ರವೇಶವನ್ನು ಬೆಂಬಲಿಸುವುದಕ್ಕೆ ನಮಗೆ ಏನೂ ಕಷ್ಟವಾಗಲಿಲ್ಲ. ಸೋವಿಯೆತ್ ಒಕ್ಕೂಟದೊಡನೆ ಕೆಲವು ವಿಚಾರಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದ ಸಮಯದಲ್ಲಿ ನಾವು ಹೀಗೆ ಮಾಡಿದ್ದು.

ಕಮ್ಯುನಿಸ್ಟ್ ಪಕ್ಷದ ವಿಚಾರ ಏನು? ತಾವು ಸಂಪಾದಕರಾಗಿದ್ದ ನ್ಯೂಏಜ್‌ನ ಆ ಅವಧಿಯ ಪುಟಗಳನ್ನು ಭೂಪೇಶ್‌ಗುಪ್ತ ಪರಿಶೀಲಿಸಬೇಕು. ಅದರಲ್ಲಿ ಆ ಉಗ್ರ-ಪರಿಷ್ಕರಣವಾದಿ ಡ್ಯುಬೆಕ್‌ನ ನೀತಿಗಳ ಬಗ್ಗೆ ಕಾಲಂಗಟ್ಟಲೆ ಪ್ರಶಂಸೆ ಇದೆ. ಸೋವಿಯೆತ್ ಪ್ರವೇಶ ಇಲ್ಲದಿದ್ದಿದ್ದರೆ ಆತ ಜೆಕೊಸ್ಲೋವಾಕಿಯವನ್ನು ಸಾಮ್ರಾಜ್ಯಶಾಹಿಗಳಿಗೆ ಕೊಟ್ಟುಬಿಟ್ಟಿರುತ್ತಿದ್ದ, ಪ್ರವೇಶ ನಡೆದನಂತರ, ಸೋವಿಯೆತ್‌ಗೆ ಬೆಂಬಲ ಸೂಚಿಸಲು ಸಿ. ಪಿ. ಐ. ಗೆ ತಿಂಗಳುಗಟ್ಟಲೆ ಬೇಕಾಯಿತು. ನಾವು ಈ ಪ್ರಶ್ನೆಯನ್ನು ಮೊದಲೇ ಎತ್ತಿದ್ದೆವು. ಆದರೆ ಭೂಪೇಶ್‌ಗುಪ್ತ ಇದನ್ನು ಉಪಾಯವಾಗಿ ದಾಟಿಸಿದರು. ಏಕೆಂದರೆ ಇದರಿಂದ, ಸಿ. ಪಿ. ಐ. ಮತ್ತು ಕಾರ್ಮಿಕ ಅಂತರರಾಷ್ಟ್ರೀಯತೆ ಎರಡಕ್ಕೂ ಎರಡು ಧ್ರುವಗಳ ಅಂತರ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಆಫ್‌ಘಾನಿಸ್ತಾನದಲ್ಲಿ ಚೀನದ ಪಾತ್ರದ ಬಗ್ಗೆ ನಾವು ಮೌನವಾಗಿದ್ದೇವೆಂದು ಹೇಳಿ ಭೂಪೇಶ್‌ಗುಪ್ತ ಇದರಿಂದ ಗಮನವನ್ನು ಬೇರೆಡೆಗೆ ಸೆಳೆಯುವಂತಿಲ್ಲ. ಮೊತ್ತಮೊದಲಿಗೆ ಇದರ ಬಗ್ಗೆ ನಾವು ಮೌನವಾಗಿದ್ದೇವೆಂದು ಹೇಳುವುದೇ ಸತ್ಯವನ್ನು ತಪ್ಪುತಪ್ಪಾಗಿ ಹೇಳಿದಂತೆ, ನಮ್ಮ ಹೇಳಿಕೆಗಳು, ಲೇಖನಗಳು, ಸಂಸತ್ ಭಾಷಣಗಳು (ಈ ಲೇಖಕನದೂ ಸೇರಿ) ಎಲ್ಲವೂ ಆಫ್‌ಘಾನಿಸ್ತಾನದಲ್ಲಿ ಚೀನದ ಪಾತ್ರದ ಬಗ್ಗೆ ವಿಷಾದ ಸೂಚಿಸಿವೆ. ಸತ್ಯಗಳ ಬಗ್ಗೆ ಭೂಪೇಶ್‌ಗುಪ್ತರಿಗೆ ಸ್ವಲ್ಪ ಹೆಚ್ಚು ಗೌರವ ಬರಲಿ ಎಂದು ನಾವು ಆಶಿಸುತ್ತೇವೆ.

ಭೂಪೇಶ್‌ಗುಪ್ತರ ಲೇಖನದ ಬಗ್ಗೆ ಹೆಚ್ಚು ದೀರ್ಘವಾಗಿ ಹೇಳಲು ನಾವು ಇಚ್ಛಿಸುವುದಿಲ್ಲ. ಆದರೆ ಚರಿತ್ರೆಯನ್ನು ಅವರು ಹೇಗೆ ವಿಕೃತಗೊಳಿಸಿದ್ದಾರೆಂಬುದನ್ನು ಹೇಳುವುದಕ್ಕೆ ಕೆಲವು ಅಂಶಗಳನ್ನು ಸೂಚಿಸುತ್ತೇವೆ.

1962ರಲ್ಲಿ ಸಿ ಪಿ ಐ. ನ ಕೆಲವರ ಬಂಧನ ಆದಾಗ ಪಕ್ಷದ ನಾಯಕತ್ವವು ಇದನ್ನು ಖಂಡಿಸಿದ್ದೇ ಅಲ್ಲದೆ, ಒಂದು ಪ್ರತಿಭಟನಾ ಪ್ರಚಾರವನ್ನೂ ನಡೆಸಿತು ಎಂದು ಭೂಪೇಶ್‌ಗುಪ್ತ ಹೇಳಿದ್ದಾರೆ. ಆದರೆ ಇದು ಸತ್ಯಕ್ಕೆ ವಿರೋಧವಾದುದು.

ಪ್ರಾವ್ದಾ ಕೂಡ ಬಂಧನಗಳನ್ನು ಪ್ರತಿಭಟಿಸಿದ್ದರೂ, ನಾಯಕತ್ವವು ಪ್ರತಿಭಟನೆಯ ಒಂದು ಮಾತನ್ನೂ ಆಡಲಿಲ್ಲವೆಂದು ಕಾಂ. ಇ. ಎಂ. ಎಸ್. ನಂಬೂದಿರಿಪಾಡ್ ತಮ್ಮ "ರಿವಿಜನಿಸಂ ಅಂಡ್ ಡಾಗ್ಮಾಟಿಸಂ ಇನ್ ಸಿ. ಪಿ. ಐ." ಎಂಬ ದಾಖಲೆಯಲ್ಲಿ ಆಪಾದಿಸಿದ್ದಾರೆ. ನ್ಯೂಏಜ್‌ನ 1962ರ ಜನವರಿ ಸಂಚಿಕೆಗೆ ಕಾಂ. ಇ. ಎಂ. ಎಸ್, ಒಂದು ಸಂಪಾದಕೀಯ ಬರೆದು, ಬಂಧಿತ ಕಮ್ಯುನಿಸ್ಟರ ಬಿಡುಗಡೆಗೆ ಒತ್ತಾಯಿಸಿದ್ದರು. ಸಂಪಾದಕ ಮಂಡಲಿಯಲ್ಲಿದ್ದ ಇನ್ನಿಬ್ಬರು ಸಿ. ಪಿ. ಐ. ನಾಯಕರು ಕಾಂ. ಇ. ಎಂ. ಎಸ್. ಗೆ ಅರಿವಿಲ್ಲದೆಯೇ ಇಡೀ ಪ್ಯಾರಾವನ್ನೇ ತೆಗೆದು ಹಾಕಿದ್ದರು. ಬಂಧಿತ ಕಾಮ್ರೇಡುಗಳ ಬಿಡುಗಡೆಗೆ ಒತ್ತಾಯಿಸಲು ಸೇರಿಸಿದ್ದ ಸಭೆಯಲ್ಲಿ ಮಾತನಾಡಿದ್ದಕ್ಕಾಗಿ ಕಾಂ. ಎ. ಕೆ. ಗೋಪಾಲನ್ ಅವರ ಮೇಲೆ ಪಕ್ಷವು ಶಿಸ್ತುಕ್ರಮವನ್ನು ತೆಗೆದುಕೊಳ್ಳಲು ಸಲಹೆ ಮಾಡಿರಲಿಲ್ಲವೆ? ಪಕ್ಷದ ಮೇಲೆ ತೀವ್ರ ಆಪಾದನೆಗಳನ್ನು ಮಾಡಲು, ಆಗಿನ ಗೃಹಮಂತ್ರಿ ಗುಲ್ಜಾರಿಲಾಲ್ ನಂದಾ ಅವರ "ವೈಟ್ ಪೇಪರ್"ಗೆ ಪಕ್ಷದ ಕೇಂದ್ರ ನಿಯಂತ್ರಣ ಸಮಿತಿಯ ವರದಿಯೇ ಪ್ರಾಸಿಕ್ಯೂಷನ್ ಸಾಕ್ಷಿಯಾದದ್ದು ಭೂಪೇಶ್‌ಗುಪ್ತ ಅವರಿಗೆ ನೆನಪಿಲ್ಲವೆ? ಇಷ್ಟು ಸಾಕು.

ಮುಂದಿನ ಅಂಶಕ್ಕೆ ಹೋಗೋಣ. ನಾವು ಸೋವಿಯೆತ್ ನಿಲುವನ್ನು ತಪ್ಪಾಗಿ ಕೆಡಿಸುತ್ತಿದ್ದೇವೆಂದೂ, ಸೋವಿಯೆತ್ ಒಕ್ಕೂಟ 1974ರ ರೈಲ್ವೆ ಮುಷ್ಕರವನ್ನು "ಖಂಡಿಸಿಯೇ" ಇಲ್ಲವೆಂದೂ ಭೂಪೇಶ್‌ಗುಪ್ತ ಹೇಳುತ್ತಾರೆ. ಇಂದಿರಾಗಾಂಧಿಯ ಪ್ರಗತಿಶೀಲ ಸರ್ಕಾರದ ವಿರುದ್ಧ ಹೂಡಲಾಗಿದೆ ಎಂದು, ದೇಶದ ಕೆಲವು ಭಾಗಗಳಲ್ಲಿ ಬರಗಾಲ ಪರಿಸ್ಥಿತಿ ಇರುವುದರಿಂದ ಆಹಾರಧಾನ್ಯಗಳ ಸಾಗಾಣಿಕೆಗೆ ತೊಂದರೆ ಮಾಡುತ್ತಿರುವುದರಿಂದ ಇದು ರಾಷ್ಟ್ರವಿರೋಧಿ ಎಂದು, ರೈಲ್ವೆ ಮುಷ್ಕರವನ್ನು ಮಾಸ್ಕೋದ ನ್ಯೂಟೈಮ್ಸ್ ಖಂಡಿಸಿರುವುದರ ಬಗ್ಗೆ ಗುಪ್ತರ ಗಮನವನ್ನು ಸೆಳೆಯೋಣವೇ? ಭಾರತೀಯ ಪರಿಸ್ಥಿತಿಯನ್ನು ವಿವರಿಸುವ ಸೋವಿಯೆತ್ ಲೇಖಕರ ಅನೇಕ ಪುಸ್ತಕಗಳು ಪ್ರಕಟಣೆಗಳು ಇವೆ. ಇವೆಲ್ಲವನ್ನೂ ಉಲ್ಲೇಖಿಸಿ ಈ ಲೇಖನ ಬೆಳೆಸುವ ಉದ್ದೇಶ ನಮಗಿಲ್ಲ. ಆದರೆ ಭೂಪೇಶ್‌ಗುಪ್ತರಿಗೆ ಬೇಕಾಗುವುದಾದರೆ ಅಂಥ ಸೋವಿಯೆತ್ ಪ್ರಕಟಣೆಗಳು ಮತ್ತು ಟೀಕೆಗಳ ಪಟ್ಟಿ, ಗ್ರಂಥಸೂಚಿ ಅಥವಾ ಅವರಿಗೇನು ಬೇಕೋ ಅದನ್ನು ಒದಗಿಸೋಣ.

ತಮ್ಮ ಪಕ್ಷ ಚೀನ ಅಥವಾ ಪಾಕಿಸ್ತಾನದ ಬಗ್ಗೆ ಎಂದು ಸಂದೇಹಿಗಳಾಗಿಲ್ಲ. ಹಾಗೆ ನೋಡಿದರೆ ಅಂಥದರ ವಿರುದ್ಧ ಹೋರಾಡಿದೆ ಎಂದು ಭೂಪೇಶ್‌ಗುಪ್ತ ಹೇಳಿದ್ದಾರೆ.

ಆಗಿನ ಸಿ. ಪಿ. ಐ. ಅಧ್ಯಕ್ಷ ಎಸ್. ಎ. ಡಾಂಗೆ ಅವರು, ನಾಯಕತ್ವದ ಇತರರ ಒಪ್ಪಿಗೆಪಡೆದು, "ಚೀನವು ಅಸ್ಸಾಮಿನ ಟೀ ತೋಟಗಳು ಮತ್ತು ಎಣ್ಣೆ ಕೇಂದ್ರಗಳನ್ನು ಕಬಳಿಸಲು ಹವಣಿಸಿದೆ" ಎಂದು ಬರೆದರು. ಜನಸಂಘ ಕೂಡ ಅಷ್ಟು ಮಟ್ಟಕ್ಕೆ ಹೋಗಲಿಲ್ಲ. "ಫಾರ್ವರ್ಡ್ ಟು ಡಿಫೆನ್ಸ್ ಆಫ್ ದಿ ಮದರ್‌ಲ್ಯಾಂಡ್ ಅಂಡರ್ ದಿ ಬ್ಯಾನರ್ ಆಫ್ ಜವಹರಲಾಲ್ ನೆಹರು" ಎಂಬ ಸಿ ಪಿ ಐ.ನ ಅಂದಿನ ಪ್ರಕಟಣೆ ಭೂಪೇಶ್‌ಗುಪ್ತರ ಬೀರುವಿನಲ್ಲಿ ಇರಬೇಕು.

ಪಾಕಿಸ್ತಾನ ಮತ್ತು 1965ರ ಯುದ್ಧದ ವಿಚಾರ ಏನು? ಸಿ ಪಿ.ಐ. "ದ್ವೇಷ ಹಲ್ಲೆಗಳನ್ನು ತಣಿಸಲು ಕೆಲಸ ಮಾಡಿತು, ಆರೆಸ್ಸೆಸ್, ಜನಸಂಘ ಮತ್ತಿತರ ಮತಾಂಧರ ವಿರುದ್ಧ ಹೋರಾಡಿತು" ಮತ್ತು "(ಸೋವಿಯೆತ್ ಸಲಹೆ ಮಾಡಿದ ತಾಷ್ಕೆಂಟ್ ಮಾತುಕತೆ)ಯನ್ನು ಸ್ವಾಗತಿಸಿ ನಮ್ಮ ಪಕ್ಷದ ಕೇಂದ್ರ ಸೆಕ್ರೆಟೇರಿಯೆಟ್ ಹೇಳಿಕೆಯನ್ನಿತ್ತಿತು" ಎಂದು ಭೂಪೇಶ್‌ಗುಪ್ತ ಬರೆದಿದ್ದಾರೆ. ವಾಸ್ತವವಾಗಿ ಆದದ್ದೇನು? ಸಿ ಪಿ.ಐ. ಬಗ್ಗೆ ನಾವು ಏನು ಹೇಳಿದೆವು. ದೇಶದ ಜನತೆ ಏನು ಹೇಳಿದರು ಎಂಬುದನ್ನು ನಾವು ಉಲ್ಲೇಖಿಸಲು ಇಚ್ಛಿಸದೆ, ಸಿ.ಪಿ.ಐ. ಹೇಳಿದ್ದರ ಬಗ್ಗೆಯೇ ಬರೆಯುತ್ತೇವೆ. 1968ರ ಫೆಬ್ರವರಿಯಲ್ಲಿ ಪಟನಾದಲ್ಲಿ ನಡೆದ ಸಿ.ಪಿ ಐ ನ ಎಂಟನೇ ಅಧಿವೇಶನದ ರಾಜಕೀಯ ವರದಿಯಿಂದ ಮುಂದಿನದನ್ನು ಉಲ್ಲೇಖಿಸುತ್ತೇವೆ:

"ಯುದ್ಧ ನಡೆಯುತ್ತಿದ್ದಾಗ ರಕ್ಷಣೆ ಭಾವವನ್ನು ನಾವು ಪ್ರೇರೇಪಿಸಿದ್ದು ಮತ್ತು ರಕ್ಷಣೆಯ ಕರ್ತವ್ಯಗಳನ್ನು ಎತ್ತಿ ಹೇಳಿದ್ದು ಸರಿ. ಆದರೆ ಆಗ ನಾವು ನಡೆಸಿದ ಈ ಹೋರಾಟ ತಪ್ಪುಗಳಿಂದ ಕೂಡಿತ್ತು ಏಕೆಂದರೆ, ನಾವು ಯುದ್ಧ ಮುಗಿಯಲಿ, ಎಂದು ಶಾಂತಿಯುತ ಕ್ರಮಗಳು ಇರಲಿ ಎಂದು ಹೆಚ್ಚು ಒತ್ತಾಯಿಸಲಿಲ್ಲ. ನಮ್ಮ ಈ ಕೊರತೆಗಳನ್ನು ಸಿ.ಪಿ ಐ (ಎಂ) ಚೆನ್ನಾಗಿ ಉಪಯೋಗಿಸಿಕೊಂಡಿತು." ದ್ವೇಷ ಹಲ್ಲೆಗಳನ್ನು ತಣಿಸುವುದಕ್ಕೆ ಸಿ.ಪಿ ಐ. ಕೆಲಸ ಮಾಡಿತು ಎಂಬ ಭೂಪೇಶ್‌ಗುಪ್ತರ ಹೇಳಿಕೆ ಈಗೇನಾಯಿತು?

ಅಲ್ಲದೆ "ಜನಸಂಘ ಮತ್ತಿತರ ಸಂದೇಹಿಗಳ ಹೇಳಿಕೆಗಳಿಗೂ ನಮಗೂ ಪ್ರಜ್ಞಾಪೂರ್ವಕವಾದ, ತೀವ್ರವಾದ ಬೇರ್ಪಡುವ ರೇಖೆ ಇರಬೇಕಾಗಿತ್ತು" ಎಂದಿದೆ. ಆರೆಸ್ಸೆಸ್ ಜನಸಂಘ ಮುಂತಾದ ಕೋಮುವಾದಿಗಳ ವಿರುದ್ಧ ಸಿ.ಪಿ.ಐ. ಹೋರಾಡಿತು ಎಂಬ ಭೂಪೇಶ್‌ಗುಪ್ತರ ಹೇಳಿಕೆ ಈಗೇನಾಯಿತು? ಸಂದೇಹಿಗಳಿಗೂ ಅವರಿಗೆ ಬೇರ್ಪಡುವ ರೇಖೆ ಇಲ್ಲದ್ದರಿಂದ ಇವರೂ ಅವರೇ ಆಗಲಿಲ್ಲವೆ?

"ಸೋವಿಯೆತ್ ಹೇಳಿಕೆಗಳು ಮತ್ತು ತಾಷ್ಕೆಂಟ್ ಮಾತುಕತೆಗಳ ಬಗ್ಗೆ ನಾವು ತಣ್ಣನೆಯ ಧೋರಣೆ ತಳೆದದ್ದರ ಮೂಲಕ ನಮ್ಮ ದೌರ್ಬಲ್ಯ ಪ್ರಕಟವಾಯಿತು. ಹಾಗೆ ನೋಡಿದರೆ ಇಂಡಿಯಾ-ಪಾಕ್ ಯುದ್ಧದ ಬಗ್ಗೆ ಕೆಲವು ಸೋವಿಯೆತ್ ಹೇಳಿಕೆಗಳನ್ನು ನಾವು ಮೊದಲು ಟೀಕಿಸಿದೆವು. ಸೋವಿಯೆತ್ ಪ್ರೇರೇಪಣೆಯಲ್ಲಿ ಇಂಡಿಯಾ-ಪಾಕಿಸ್ತಾನ್ ಮಾತುಕತೆಗೆ ಸಲಹೆ ಬಂದಾಗ ನಾವು ಅದನ್ನು ಶಕ್ತಿಯುತವಾಗಿ ಟೀಕಿಸಲಿಲ್ಲ. ಆದ್ದರಿಂದ ನಮ್ಮ ಪಕ್ಷದ ಹೇಳಿಕೆ ಬರುವುದಕ್ಕೆ ಮುಂಚೆ ಲಾಲ್ ಬಹಾದೂರ್ ಶಾಸ್ತ್ರಿಯವರ ಇಂಡಿಯಾ-ಪಾಕಿಸ್ತಾನ್ ಮಾತುಕತೆಗಳನ್ನು ಬೆಂಬಲಿಸುವ ಸಾರ್ವಜನಿಕ ಪ್ರಕಟಣೆ ಬಂದದ್ದರಲ್ಲಿ ಆಶ್ಚರ್ಯವಿಲ್ಲ". ಸೋವಿಯೆತ್ ಪ್ರೇರಣೆಯನ್ನು ಸಿ. ಪಿ. ಐ. ಸ್ವಾಗತಿಸಿದ್ದೇ ಅಲ್ಲದೆ "ಈ ಲೇಖಕನು ಆಗಿನ ಪ್ರಧಾನಿ ಲಾಲ್‌ಬಹಾದೂರ್ ಶಾಸ್ತ್ರಿಯವರನ್ನು ಭೇಟಿಯಾಗಿ ಈ ಮಾತುಕತೆಗಳ ಸಲಹೆಯನ್ನು ಒಪ್ಪಿಕೊಳ್ಳುವಂತೆ ವಿನಂತಿಸಿಕೊಂಡಿದ್ದನು" ಎಂಬ ಭೂಪೇಶ್‌ಗುಪ್ತರ ಹೇಳಿಕೆಗೆ ಈಗೇನಾಯಿತು? ಲಾಲ್‌ಬಹಾದೂರ್ ಶಾಸ್ತ್ರಿಯವರ ಸಲಹೆ ಸಿ. ಪಿ. ಐ. ನ ದಕ್ಕಿಂತ ಮುಂಚೆ ಬಂತು ಎಂದು ಪಕ್ಷದ ರಾಜಕೀಯ ವರದಿ ಒಪ್ಪಿಕೊಂಡಮೇಲೆ ಹೀಗೆ ಹೇಳುತ್ತಾರೆ.

(6ನೇ ಪುಟ ನೋಡಿ)

ರೈತರ ಬೇಡಿಕೆ ಈಡೇರಿಸಲು ವಿಜಾಪುರ ರೈತಸಂಘದ ಒತ್ತಾಯ

ರೈತರ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕೆಂದು ವಿಜಾಪುರ ಜಿಲ್ಲಾ ರೈತಸಂಘವು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಇತ್ತೀಚೆಗೆ ಅರ್ಪಿಸಿದೆ. ಮನವಿ ಪತ್ರದ ನಕಲೊಂದನ್ನು ರಾಜ್ಯದ ಮುಖ್ಯಮಂತ್ರಿಗಳಿಗೂ ಕಳುಹಿಸಲಾಗಿದೆ.

ಜುಲೈ 16ರಂದು ವಿಜಾಪುರದಲ್ಲಿ ನಡೆದ ಜಿಲ್ಲಾ ರೈತಸಂಘದ ಸರ್ವಸದಸ್ಯರ ಸಭೆಯಲ್ಲಿ ಜಿಲ್ಲೆಯ ನೂರಾರು ರೈತರು ಸೇರಿದ್ದರು. ವಿಜಾಪುರ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಭೀಮಸಿ ಕಲಾದಗಿ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ರೈತಸಂಘದ ಸಭೆಯು ಹಲವಾರು ಠರಾವುಗಳನ್ನು ಪಾಸು ಮಾಡಿ ರೈತರ ಬೇಡಿಕೆ ಈಡೇರಿಕೆಗೆ ಸರ್ಕಾರವನ್ನು ಆಗ್ರಹಪಡಿಸಿತು.

ಸರ್ಕಾರವು ಅನ್ಯಾಯುವಾಗಿ ಮತ್ತು ಬಲಾತ್ಕಾರವಾಗಿ ರೈತರಿಂದ ವಸೂಲಿ ಮಾಡುತ್ತಿರುವ ಅಭಿವೃದ್ಧಿ ಕರ (1500 ರೂ.) ವನ್ನು ಸಂಪೂರ್ಣ ಮನ್ನಾ ಮಾಡಬೇಕು. ವಿಜಾಪುರ ಜಿಲ್ಲೆಯಲ್ಲಿ ಅನಾವೃಷ್ಟಿ ಇರುವುದರಿಂದ ಜಿಲ್ಲೆಯ ಭೂಕಂದಾಯ ಸಂಪೂರ್ಣ ರದ್ದಾಗಬೇಕು. ಸಹಕಾರ ಸಂಘಗಳ ಸಾಲವೂ ರದ್ದಾಗಬೇಕು ಅಥವಾ ಕನಿಷ್ಟ ವಸೂಲಾತಿಯಾದರೂ ಮುಂದೂಡಲ್ಪಡಬೇಕು.

ರೈತರು ಬೆಳೆಯುವ ಉಳ್ಳಗಡ್ಡೆಗೆ ಲಾಭದಾಯಕ ಬೆಲೆ ಸಿಕ್ಕುವ ವ್ಯವಸ್ಥೆಯಾಗಬೇಕು. ರೈತರಿಗೆ ಅತ್ಯಗತ್ಯವಾದ ಉತ್ತಮ ಬಿತ್ತನೆ ಬೀಜಗಳು, ರಸಗೊಬ್ಬರ, ಇಂಜಿನಕ್ಕೆ ಡೀಸೆಲ್ ಎಣ್ಣೆ, ವ್ಯವಸಾಯ ಉಪಕರಣಗಳು ರಿಯಾಯಿತಿ ದರದಲ್ಲಿ ರೈತರಿಗೆ ನೇರವಾಗಿ ದೊರೆಯಬೇಕು ಎಂಬುವು ಮುಖ್ಯ ಠರಾವುಗಳಾಗಿದ್ದು, ಇವುಗಳನ್ನು ಈಡೇರಿಸಬೇಕೆಂದು ರೈತಸಂಘ ಒತ್ತಾಯಿಸಿದೆ.

ಸಾರಿಗೆ ಪ್ರಯಾಣದ ದರ ಏರಿಸಿರುವುದನ್ನು ಇಳಿಸುವಂತೆ, ರೈತರನ್ನೊಳಗೊಂಡಂತೆ ವಿರೋಧ ಪಕ್ಷಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು, ಆ ಬೇಡಿಕೆ ಈಡೇರಬೇಕು ಎಂದು ರೈತಸಂಘ ಆಗ್ರಹಪಡಿಸಿದೆ.

ವಾಹನ - ರಸ್ತೆ - ರೈಲು ಸೌಲಭ್ಯ ಸಿಕ್ಕಲಿ :

ಜಿಲ್ಲೆಯಾದ್ಯಂತ ಎಲ್ಲಾ ಹಳ್ಳಿಗಳಿಗೆ ಪ್ರಯಾಣಕ್ಕೆ ಬಸ್ಸುಗಳು, ರಸ್ತೆ ಸೌಲಭ್ಯ ಮತ್ತು ರೈಲ್ವೆ ಸೌಲಭ್ಯ ಜಿಲ್ಲೆಗೆ ಹಿಂದೆಯೇ ಮಂಜೂರಾಗಿದ್ದರೂ ಯಾವುದೇ ಪ್ರಗತಿಯಾಗಿಲ್ಲದಿರುವುದನ್ನು ತೀವ್ರವಾಗಿ ಗಮನಿಸಿದ ರೈತಸಂಘ, ಸಾರಿಗೆ ಸೌಲಭ್ಯಕ್ಕಾಗಿ ರಾಜ್ಯ-ಕೇಂದ್ರ ಸರ್ಕಾರಗಳನ್ನು ಆಗ್ರಹಪಡಿಸಿದೆ.

ಕುಡಿಯುವ ನೀರು ಕೊಡಿ :

ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಹೀರೆ ಅಸಂದಿ ಗ್ರಾಮದಲ್ಲಿ ಹರಿಜನರಿಗೆ ಕುಡಿಯುವ ನೀರಿನ ಬಾವಿಯೂ ಇಲ್ಲದಿರುವುದರಿಂದ ಕುಡಿಯುವ ನೀರಿನ ಬಾವಿ ತ್ವರಿತವಾಗಿ ಆಗಬೇಕೆಂದೂ ರೈತಸಂಘ ಒತ್ತಾಯಿಸಿದೆ.

ಸರ್ವಸದಸ್ಯರ ಈ ಸಭೆಯಲ್ಲಿ ಜಿಲ್ಲಾ ರೈತಸಂಘದ ಉಪಾಧ್ಯಕ್ಷರನ್ನಾಗಿ ಎ. ಆರ್. ಕೂಡಗಿ, ಕಾರ್ಯದರ್ಶಿಗಳನ್ನಾಗಿ ಎಂ. ಪಿ. ಗಡಿಯಾರಸಾ, ಖಜಾಂಚಿಯನ್ನಾಗಿ ಎ. ಎಸ್. ಹೊನ್ನುಟಗಿಸಾ ಅವರನ್ನು ಆರಿಸಲಾಯಿತು.

●

ಸರ್ಕಾರಿ ಕಾಲೇಜಿನ ವಿದ್ಯಾರ್ಥಿ ಮುಷ್ಕರಕ್ಕೆ ಬೆಂಬಲ

ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿಗಳು ಹಾಸ್ಟೆಲ್ ಅವ್ಯವಸ್ಥೆ ವಿರುದ್ಧ ಮತ್ತು ಲೈಬ್ರರಿ ಸೌಲಭ್ಯಕ್ಕಾಗಿ ನಡೆಸುತ್ತಿರುವ ಮುಷ್ಕರವನ್ನು ಎಸ್.ಎಫ್.ಐ. ಬೆಂಬಲಿಸುತ್ತದೆ. ವಿದ್ಯಾರ್ಥಿಗಳ ಈ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ವಿದ್ಯಾರ್ಥಿನಿಲಯದ ಅಧ್ಯಕ್ಷರಾದ ರಾಮಚಂದ್ರೇಗೌಡರನ್ನು ಮತ್ತು ಬಿ. ಸಿ. ಎಂ. ನಿರ್ದೇಶಕರನ್ನು ಬೆಂಗಳೂರು ಜಿಲ್ಲಾ ಎಸ್.ಎಫ್.ಐ. ಸಂಚಾಲಕ ಕಾಂ. ಬಸವಲಿಂಗಯ್ಯ ಒತ್ತಾಯಿಸಿದ್ದಾರೆ.

ತಪ್ಪುಗಳನ್ನು ಮರೆಮಾಚಲು ಚರಿತ್ರೆಯ ವಿಕೃತಿ

(5ನೇ ಪುಟದಿಂದ)

ಈ "ದೌರ್ಬಲ್ಯ" ಅವರ ಬಂಡವಾಳಶಾಹಿ-ರಾಷ್ಟ್ರೀಯವಾದದಿಂದ ಅಲ್ಲದೆ ಬೇರೆಲ್ಲಿಂದ ಬಂದಿದೆ? ಅದು ಚೀನ ಮತ್ತು ಪಾಕಿಸ್ತಾನಗಳ ವಿಚಾರದಲ್ಲಿ ಕೀಳಮಟ್ಟಕ್ಕೆ ಇಳಿದಿದೆಯಷ್ಟೆ.

ಚರಿತ್ರೆಯನ್ನು ತಪ್ಪುಗೊಳಿಸುತ್ತಿರುವವರು, ಮತ್ತೆ ಬರೆಯುತ್ತಿರುವವರು, ವಿಕೃತಗೊಳಿಸುತ್ತಿರುವವರು ಯಾರು ಎಂಬುದನ್ನು ತೋರಿಸುವುದಕ್ಕೆ ಇಷ್ಟು ಸಾಕು.

ಮೊದಲಲ್ಲೇ ಹೇಳಿದ ಹಾಗೆ ದೇಶದ ಎಡಚಳುವಳಿಯ ಮುಖ್ಯ ಕರ್ತವ್ಯವೆಂದರೆ, ಎಡ ಪಕ್ಷಗಳ ಐಕ್ಯತೆಯನ್ನು ಬಲಪಡಿಸುವುದು, ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ಕಟ್ಟುವುದು ಮತ್ತು ಸರ್ವಾಧಿಕಾರಿ ಶಕ್ತಿಗಳಿಗೆ ವಿಶಾಲ ಪ್ರತಿರೋಧವನ್ನು ಸಂಘಟಿಸುವುದು. ಜನತೆಯ ರಕ್ಷಣೆಗಾಗಿ ಐಕ್ಯ ಸಾಮೂಹಿಕ ಕಾರ್ಯಗಳನ್ನು ಬೆಳೆಸುವುದರಲ್ಲಿ ಮತ್ತು ಈ ಕರ್ತವ್ಯ ನಿರ್ವಹಣೆಯಲ್ಲಿ ತನ್ನ ಪಾಲನ್ನೂ ಕೊಡಲು ಮಾರ್ಕ್ಸ್‌ವಾದಿ ಪಕ್ಷ ತುಂಬ ಕಾಳಜಿ ವಹಿಸಿದೆ. ಆದ್ದರಿಂದ ಯಾವುದಾದರೂ ಸೈದ್ಧಾಂತಿಕ ಪ್ರಶ್ನೆಗಳು ಎದ್ದಾಗ, ಅದನ್ನು ಚರ್ಚೆಗೆ ತೆಗೆದುಕೊಳ್ಳುವುದು, ಮಾರ್ಕ್ಸ್‌ವಾದ-ಲೆನಿನ್‌ವಾದದ ರಕ್ಷಣೆಯ ದೃಷ್ಟಿಯಿಂದ ಅಗತ್ಯ ಎಂದು ನಾವು ಭಾವಿಸುತ್ತೇವೆ.

●

ಚಿತ್ರ ವಿಮರ್ಶೆ

ಪ್ರೀತಿ ತುಂಬಿದ ಹೃದಯ ತಟ್ಟುವ 'ಎಲ್ಲಿಂದಲೋ ಬಂದವರು'

ತಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ ತಮ್ಮದೇ ಆದ ವೈಶಿಷ್ಟ್ಯ ತೋರಿಸುವ ಲಂಕೇಶ್ ತಮ್ಮ ಇತ್ತೀಚಿನ 'ಎಲ್ಲಿಂದಲೋ ಬಂದವರು' ಚಿತ್ರದಲ್ಲಿ ಚಿತ್ರ ಮಾಧ್ಯಮದ ಮೇಲಿನ ಹಿಡಿತವನ್ನು ತಮ್ಮ ಮಿಕ್ಕೆಲ್ಲ ಚಿತ್ರಗಳಿಗಿಂತ ಉತ್ತಮವಾಗಿ ತೋರಿಸಿದ್ದಾರೆ. ಇದರ ಪರಿಣಾಮ ನವಶಕ್ತಿ ಫಿಲಂಸ್ ಪ್ರೈ. ಲಿ. ಅವರ ಚೊಚ್ಚಲ ಕಾಣಿಕೆಯು ಒಂದು ನೀಟಾದ, ಅರ್ಥಗರ್ಭಿತವಾದ ಹಾಗೂ ಮನರಂಜನೆಯುಳ್ಳ ಚಿತ್ರವಾಗಿದೆ.

ಒಳ್ಳೆಯ ಚಿತ್ರಗಳನ್ನು ನೀಡುವವರಲ್ಲಿ ಒಬ್ಬರಾದ ಲಂಕೇಶ್ ತಮ್ಮ ಚಿತ್ರಗಳಲ್ಲಿ ಇತರರಿಗಿಂತ ವಿಭಿನ್ನವಾದ ಕಥಾವಸ್ತುವನ್ನು ಉಪಯೋಗಿಸುತ್ತಾರೆ. ಇದರ ಫಲವಾಗಿ ಇವರ ಚಿತ್ರಗಳು ಒಂದು ರೀತಿಯ ತಮ್ಮದೇ ಆದ ವೈಶಿಷ್ಟ್ಯ ಹೊಂದಿದ್ದು, ಪಟ್ಟಣ ಜನರ, ಯುವಜನರ ಸಮಸ್ಯೆಗಳನ್ನು ಮನಮುಟ್ಟುವಂತೆ ಪರಿಣಾಮಕಾರಿಯಾಗಿ ನಿರೂಪಿಸುತ್ತವೆ. 'ಎಲ್ಲಿಂದಲೋ ಬಂದವರು' ಚಿತ್ರ ಇತರ ವ್ಯಾಪಾರಿ ಮೌಲ್ಯಗಳನ್ನು ಅಳವಡಿಸಿಕೊಳ್ಳದಿದ್ದರೂ, ಮನರಂಜನೆ ನೀಡುವುದರಲ್ಲಿ ಯಶಸ್ವಿಯಾಗಿದೆ. ಯಾಕೆಂದರೆ ಇತೀಚಿನ ಚಿತ್ರಗಳೆಲ್ಲವೂ ವಿಮರ್ಶಕರನ್ನು ಮತ್ತು ಕೆಲ ರೀತಿಯ ಚಿತ್ರರಸಿಕರನ್ನು ಮಾತ್ರ ಮುಟ್ಟುತ್ತಿದ್ದವು. ಆದರೆ ಲಂಕೇಶರ ಚಿತ್ರವು ಎಲ್ಲ ರೀತಿಯ ಜನರನ್ನು ರಂಜಿಸಬಲ್ಲದು.

'ಎಲ್ಲಿಂದಲೋ ಬಂದವರು' ಗ್ರಾಮೀಣ ಚಿತ್ರವಾಗಿ ಚಿತ್ರಿತವಾಗಿದ್ದರೂ ನಗರಜೀವನ ಮತ್ತು ಅದರಲ್ಲಿ ಸೇರಿಕೊಂಡಿರುವ ರೂಪ ವಿಕಾರಗಳ ಬಗ್ಗೆ ಲಂಕೇಶರಿಗಿರುವ ಆತಂಕವನ್ನು ತೋರಿಸುತ್ತದೆ.

ಚಿತ್ರದಲ್ಲಿ ಬರುವ ಪಾತ್ರಗಳು ಬೊಂಬೆಗಳಂತಾಗದೆ ನಿತ್ಯಜೀವನದಲ್ಲಿನ ನಮ್ಮೆದುರಿನ ಜನರಂತೆ ಇದ್ದಾರೆ. ಮತ್ತು ಆ ಪಾತ್ರಗಳು ಎದುರಿಸುವ ತೊಂದರೆ, ಅಡಚಣೆಗಳು, ಆತಂಕಗಳು, ಅವರ ಹುಂಬತನಗಳು, ಸಣ್ಣತನಗಳು, ಅವರ ಕದೀಮಕೆಲಸಗಳು ಮುಂತಾದುವುಗಳನ್ನು ತೋರಿಸುತ್ತಾ ಹೋಗುವ ಮೂಲಕ ನಮ್ಮ ವಾಸ್ತವ ಸಮಾಜವನ್ನು ಬಯಲು ಮಾಡುತ್ತಾರೆ ನಿರ್ದೇಶಕರು. ಪ್ರೀತಿಯಿಂದ ಎಲ್ಲವನ್ನೂ ಗೆಲ್ಲಬಹುದೆಂದು ಹೇಳುವ ಈ ಚಿತ್ರ ಮನುಷ್ಯರ ಪ್ರೀತಿಗೆ ಅಡ್ಡ ಬರುವ, ಅವರನ್ನು ನಾಶಮಾಡುವ ನಮ್ಮ ನೂರೆಂಟು ಕಾನೂನುಗಳ ವ್ಯವಸ್ಥೆಗೆ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತದೆ.

ಚಿತ್ರದಲ್ಲಿನ ನಗರ ಮತ್ತು ಗ್ರಾಮೀಣ ಆಡು ಭಾಷೆಯ ಸಂಭಾಷಣೆ ಅತ್ಯಂತ ಶ್ರೀಮಂತವಾಗಿದೆ. ಚುರುಕಾದ ಈ ಸಂಭಾಷಣೆಯೇ, ಲಂಕೇಶರು ಉತ್ತಮ ನಿರ್ದೇಶಕರು ಎನ್ನುವುದಕ್ಕಿಂತ ಕ್ರಿಯಾಶೀಲ ಬರಹಗಾರರು ಎನ್ನುವುದನ್ನು ದೃಢಪಡಿಸುತ್ತದೆ. ಚಿತ್ರಮಾಧ್ಯಮವು ಮೂಲತಃ ದೃಶ್ಯಮಾಧ್ಯಮ ಎನ್ನುವತ್ತ ಲಂಕೇಶರು ಹೆಚ್ಚು ಲಕ್ಷ್ಯಕೊಡುತ್ತಿಲ್ಲ ಎಂಬ ವಿಮರ್ಶಕರ ಟೀಕೆಯು ಚಿತ್ರನೋಡಿದ ಮೇಲೆ ನಿಜ ಎನ್ನಿಸುತ್ತದೆ.

ಈ ಚಿತ್ರವು ಇತರ ವ್ಯಾಪಾರಿ ಚಿತ್ರಗಳಲ್ಲಿರುವ ತಮಾಷೆಗಳಿಂದ ಹೊರತಾಗಿದ್ದು, ಪ್ರೇಕ್ಷಕರನ್ನು ಹೆಚ್ಚು ಗೊಂದಲಗೊಳಿಸದೆ ರಂಜಿಸುತ್ತದೆ ಮತ್ತು ಚಿಂತನೆಗೆ ಹಚ್ಚುತ್ತದೆ. ನೋಡಲು ಬಂದವರನ್ನು ನಿರಾಶೆಗೊಳಿಸದ ಗುಣ 'ಎಲ್ಲಿಂದಲೋ ಬಂದವರು' ಚಿತ್ರಕ್ಕಿದೆ.

ತಮಗೆ ಹೇಳಿಮಾಡಿಸಿದಂತಿರುವ ಪಾತ್ರದಲ್ಲಿ ಲೋಕೇಶ್‌ದು ಮನಮುಟ್ಟುವ ಅಭಿನಯ. ಹಳ್ಳಿಯ ಹೆಣ್ಣಾಗಿ ವಿೂನಾಕುಟ್ಟಪ್ಪ, ಮಧ್ಯಮವರ್ಗದ ಮಹಿಳೆಯಾಗಿ ವಿಮಲನಾಯ್ಡು, ವಿದ್ಯಾವಂತ ಯುವಕನಾಗಿ ಸುರೇಶ್ ಹೆಬ್ಳಿಕರ್ ಉತ್ತಮವಾಗಿ ನಟಿಸಿದ್ದಾರೆ. ಇರುವ ಮೂರೂ ಹಾಡುಗಳಿಗೆ ಹಳ್ಳಿಯ ಭಾಷೆ ಮತ್ತು ಸ್ವರವಿದ್ದು ತುಂಬಾ ಚೆನ್ನಾಗಿವೆ. ಗ್ರಾಮೀಣ ದೃಶ್ಯಗಳಲ್ಲಿ ಕ್ಯಾಮರ ಕೆಲಸವು ಉಲ್ಲಾಸ ತರುತ್ತದೆ.

ಕಷ್ಟಪಟ್ಟು ದುಡಿದರೆ ನಮ್ಮ ಹಳ್ಳಿಯ ಜನರ ಬದುಕು ಈ ವ್ಯವಸ್ಥೆಯಲ್ಲೇ ಚೆನ್ನಾಗಬಲ್ಲದು ಎಂಬ ಅರ್ಥಬರುವಂತಿರುವ ಕಥೆಯನ್ನು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ. ಬೇಸಾಯಗಾರರನ್ನು ಸುಲಿಯುತ್ತ, ಅವರ ಪಾತ್ರೆಪಗಡಿ, ಮಾನ ಮರ್ಯಾದೆಗಳನ್ನು ಪ್ರತಿನಿತ್ಯ ಹರಾಜಿಗಿಟ್ಟು ಬಡ್ಡಿಮಕ್ಕಳ ಬದುಕ ನಡೆಸುತ್ತಿರುವ ಬ್ಯಾಂಕುಗಳವರ ಚಿತ್ರಣವು ಅವಾಸ್ತವವಾಗಿದೆ ಎಂದ ಹಳ್ಳಿಗನೊಬ್ಬನ ಮಾತು ಎಲ್ಲ ವಿಮರ್ಶೆಗಳನ್ನು ಮೀರಿ ನಿಲ್ಲುತ್ತದೆ.

—ಶಂಕರಲಾಳಾಪುರ

ಧಾರವಾಡದ ಹೋರಾಟಕ್ಕೆ ಎ.ಕೆ.ಜಿ. ಕ್ಲಬ್ ಬೆಂಬಲ

ಧಾರವಾಡ ಜಿಲ್ಲೆಯಲ್ಲಿ ನಡೆಯುವ ರೈತರ ಚಳವಳಿಗೆ ಅರಮೇರಿಯ ಎ.ಕೆ.ಜಿ. ಕ್ಲಬ್‌ನವರು ಬೆಂಬಲ ವ್ಯಕ್ತಪಡಿಸಿದ್ದಾರೆ. ಸರಕಾರದ ಗೂಂಡಾಗಳಾದ ಪೋಲೀಸರು ನಡೆಸುತ್ತಿರುವ ಗೋಲೀಬಾರನ್ನು ತೀವ್ರವಾಗಿ ಖಂಡಿಸುವುದಲ್ಲದೆ, ರೈತರ ನ್ಯಾಯವಾದ ಬೇಡಿಕೆಗಳನ್ನು, ಮೃತ ಹೊಂದಿದ ರೈತ ಸಂಬಂಧಿಗಳಿಗೆ ತಕ್ಷಣವೇ ಪರಿಹಾರವನ್ನು ಕೊಡಬೇಕೆಂದು ಒತ್ತಾಯಿಸುತ್ತದೆ.

ಬಡವರ, ರೈತರ, ಕಾರ್ಮಿಕರ, ಹರಿಜನರ, ಗಿರಿಜನರ ಹೆಸರೇಳಿ, ಅವ್ರನ್ನ ಉದ್ಧಾರ ಮಾಡುತ್ತೀವಿ, ಮೇಲೆತ್ತುತ್ತೀವಿ ಎಂದು ಹೇಳಿ ಮತ ಪಡೆದ ಸರಕಾರ, ಇಂದು ರೈತರೂ, ಕಾರ್ಮಿಕರೂ ನ್ಯಾಯವಾದ ಬೇಡಿಕೆಗಳನ್ನು ಮುಂದಿಟ್ಟು ಹೋರಾಟವನ್ನು ಮಾಡುವಾಗ ನೀಡುವ ಕಾಣಿಕೆಯೆಂದರೆ ಹಾಡು ಹಗಲಲ್ಲೇ ನಡುರಸ್ತೆಯಲ್ಲಿಯೇ ರೈತ ಕಾರ್ಮಿಕರ ಮೇಲೆ ಲಾಠಿ ಚಾರ್ಜು ಮಾಡುವುದು, ರಕ್ತದ ಹೊಳೆಯನ್ನು ಕಾಲುವೆಗಳಲ್ಲಿ ಹರಿಸುವುದು. ಅದು ಅಲ್ಲದೆ ದೇಶದ ಬೆನ್ನೆಲುಬಾದ ರೈತನ ಬೆನ್ನು ಮೂಳೆ ಮುರಿದು ಈ ಸರಕಾರ ಅವರನ್ನು ಸಮಾಧಿ ಮಾಡುವ ಕೆಲಸದಲ್ಲಿ ತೊಡಗಿದ್ದು ತೀವ್ರ ಖಂಡನಾರ್ಹವಾಗಿದೆ.

ಸರಕಾರ ಕೂಡಲೇ ಧಾರವಾಡ ಜಿಲ್ಲೆಯ ರೈತರ ಬೇಡಿಕೆಗಳನ್ನು ಪರಿಹರಿಸುವುದಲ್ಲದೆ, ಕೊಡಗು ಜಿಲ್ಲೆಯಲ್ಲಿ ಅತೀವೃಷ್ಟಿಯಿಂದ ಪೀಡಿತವಾಗಿದ್ದ ರೈತರಿಗೆ ತಕ್ಕ ಪರಿಹಾರ ಕೊಡುವಂತೆಯೂ, ದಿನದಿಂದ ದಿನಕ್ಕೆ ಏರುತ್ತಿರುವ ಅಗತ್ಯ ವಸ್ತುಗಳ ಬೆಲೆಯನ್ನು ಈ ಕೂಡಲೇ ಇಳಿಸುವಂತೆಯೂ ಸರಕಾರವನ್ನು ಒತ್ತಾಯಿಸುತ್ತದೆ. ಇಲ್ಲದಿದ್ದಲ್ಲಿ ಕೊಡಗಿನಲ್ಲಿಯೂ ಪ್ರತಿಭಟನೆ, ಹೋರಾಟ ನಡೆಸಲು ಹಿಂದೆ ಮುಂದೆ ನೋಡುವುದಿಲ್ಲ. ಸರಕಾರದ ಎಂಥಹ ದಬ್ಬಾಳಿಕೆ ಬಂದರೂ ಚಳವಳಿ ನಡೆಸಬೇಕಾದ ಪರಿಸ್ಥಿತಿ ಬರಬಹುದೆಂದು ಸರಕಾರವನ್ನು ಎಚ್ಚರಿಸಲಾಗಿದೆ.

●

ಬೆಲೆ ಏರಿಕೆ ವಿರುದ್ಧ ಶಿರಸಿ ಬಂದ್

ಸಕ್ಕರೆ, ಕಟ್ಟಿಗೆ ಮುಂತಾದ ಅಗತ್ಯ ವಸ್ತುಗಳ ಬೆಲೆಯು ತೀವ್ರವಾಗಿ ಏರುತ್ತಿವೆ. ಜನತೆಯ ಸಮಸ್ಯೆಗಳು ಹೆಚ್ಚುತ್ತಿವೆ. ಇದೆಲ್ಲ ಇಂದಿರಾಗಾಂಧಿ ಮತ್ತು ಅವರ ನೀತಿಯ ಪರಿಣಾಮ. ಇದರ ವಿರುದ್ಧ ಜನತೆಯ ಹೋರಾಟವನ್ನು ಮುನ್ನಡೆಸಲು ಶಿರಸಿಯಲ್ಲಿ ಒಂದು ಹೋರಾಟ ಸಮಿತಿಯನ್ನು ರಚಿಸಲಾಗಿದೆ. ಈ ಬಗ್ಗೆ 17-8-80ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಾಲಯದಲ್ಲಿ ಸಭೆ ಕರೆಯಲಾಗಿದೆ. 18-8-80ರಂದು ಬಂದ್ ಯೋಜನೆ ಇದೆ. ಆಗಸ್ಟ್ 31ರಂದು ಎಲ್ಲಾ ಪೋಲೀಸ್ ಠಾಣೆ ಮತ್ತು ಪೋಲೀಸ್ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಲಾಗುತ್ತದೆ.

ಈ ಕಾರ್ಯಕ್ರಮಗಳಲ್ಲಿ ಮತ್ತು ಪೋಲೀಸ್ ದೌರ್ಜನ್ಯ ವಿರೋಧಿ ಸಪ್ತಾಹದಲ್ಲಿ ಭಾಗವಹಿಸಲು ತಾಲ್ಲೂಕು ರೈತಸಂಘ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿರಸಿಶಾಖೆ ಕರೆಕೊಡುತ್ತದೆ.

○

ಶಿಡ್ಲಘಟ್ಟ ಸಾರ್ವಜನಿಕರ ಮನವಿ

ರಾಸಾಯನಿಕ ಗೊಬ್ಬರಗಳ ಬೆಲೆ ಕಡಿತ, ರೈತನ ಬೆಳೆಗೆ ನ್ಯಾಯಬೆಲೆ ನಿಗದಿ, ರೈತರ ಸಾಲರದ್ದು, ಭೂಕಂದಾಯ ರದ್ದು, ದಿನನಿತ್ಯ ಬಳಕೆ ವಸ್ತುಗಳ ಬೆಲೆ ಇಳಿತ, ಕೋಲಾರ ಜಿಲ್ಲೆಯಲ್ಲಿ ಕ್ಷಾಮ ಪರಿಹಾರ ಕಾರ್ಯ ಮುಂತಾದ ಹದಿನಾಲ್ಕು ಬೇಡಿಕೆಗಳನ್ನುಳ್ಳ ಮನವಿಯನ್ನು ಶಿಡ್ಲಘಟ್ಟದ ಸಾರ್ವಜನಿಕರು ಸರ್ಕಾರಕ್ಕೆ ಅರ್ಪಿಸಿದ್ದಾರೆ.

●

ಕಾಸ್ಟಿಕ್ ಸೋಡ ಸಂಘದ ಅಧಿಕಾರಿಗಳ ಮೇಲೆ ಹಲ್ಲೆ

ಉ. ಕನ್ನಡ ಜಿಲ್ಲೆಯ ಕಾರವಾರದ ಬಿಣಗಾದ ಕಾಸ್ಟಿಕ್ ಸೋಡ ಕಾರ್ಖಾನೆಯ ಆವರಣದಲ್ಲಿ ಪರಿಹರಿಸಲಾದ ಬಸ್ ವಿವಾದದ ಬಗ್ಗೆ ಕಾರ್ಮಿಕರಿಗೆ ವಿವರಣೆ ಕೊಡಲು ಕಾರ್ಮಿಕಸಂಘದ ಪದಾಧಿಕಾರಿಗಳು ಗೇಟ್‌ಮೀಟಿಂಗ್ ಕರೆದಿದ್ದರು. ಸಭೆ ಶಾಂತರೀತಿಯಿಂದ ಮುಗಿದು ಚದುರುತ್ತಿದ್ದಾಗ, ಯೂನಿಯನ್ ಪದಾಧಿಕಾರಿಗಳ ಮೇಲೆ ಆಡಳಿತವರ್ಗ ಸಾಕಿದ ಗೂಂಡಾಗಳು ಹಲ್ಲೆ ನಡೆಸಲಾರಂಭಿಸಿದರು. ಅಲ್ಲೇ ಇದ್ದ ಕೆಲವು ಕಾರ್ಮಿಕರು ಇವರನ್ನು ಹಿಡಿಯಲೆತ್ನಿಸಿದಾಗ ಗೂಂಡಾಗಳು ತಪ್ಪಿಸಿಕೊಂಡು ಕಾರ್ಖಾನೆಯ ಒಳಹೊಕ್ಕು ರಕ್ಷಣೆ ಪಡೆದರು. ಈ ಗೂಂಡಾಗಿರಿ ಅತ್ಯಂತ ಖಂಡನಾರ್ಹವಾಗಿದೆ.

●

ಪಕ್ಷದ ಕೋಲಾರ ಜಿಲ್ಲಾ ಕಾರ್ಯದರ್ಶಿಯಾಗಿ ಕಾಂ. ದೊರೆಸ್ವಾಮಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಸದಸ್ಯರೂ, ಹಿರಿಯ ಕಾರ್ಮಿಕ ಮುಖಂಡರೂ ಆದ ಕಾಂ. ಎಸ್. ಸವರೀದಾಸ್ ಅವರು ಪಾರ್ಟಿಯ ಮತ್ತು ಕಾರ್ಮಿಕ ಚಳುವಳಿಗೆ ರಾಜ್ಯ ಮಟ್ಟದಲ್ಲಿ ಕೆಲಸ ಮಾಡಲು ಸಾಧ್ಯವಾಗುವಂತೆ ಮಾಡಲು ಪಕ್ಷದ ಕೋಲಾರ ಜಿಲ್ಲಾ ಸಮಿತಿ ಕಾರ್ಯದರ್ಶಿ ಸ್ಥಾನವನ್ನು ಬಿಟ್ಟಿರುವರು. ಕೋಲಾರ ಜಿಲ್ಲಾ ಸಮಿತಿಗೆ ಹಿರಿಯ ಮುಂದಾಳು, ಶಿಡ್ಲಘಟ್ಟದ ಕಾಂ. ಜಿ. ದೊರೆಸ್ವಾಮಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಭೂಹೀನರಿಂದ ಜಮೀನು ವಶ ಯೋಜನೆ

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕು ರಾಯಲ್‌ಪಡ್ ಹೋಬಳಿಯ ದಿಗವ ಮಠಾರಪ್ಪಲ್ಲಿ, ತಿಮ್ಮನಪಲ್ಲಿ ಗ್ರಾಮಗಳಲ್ಲಿ ಬಂಜರು ಜಮೀನು ಸಾವಿರಾರು ಎಕರೆ ಇದ್ದು, ಇದನ್ನು ಭೂಹೀನರಿಗೆ ಹಂಚಬೇಕೆಂದು ತಾಲ್ಲೂಕಿನ ರೈತಸಂಘದ ನೇತೃತ್ವದಲ್ಲಿ ಒಂದು ನಿಯೋಗವು ಕೋಲಾರದ ಜಿಲ್ಲಾಧಿಕಾರಿ ಮತ್ತು ಅರಣ್ಯಾಧಿಕಾರಿಗಳಿಗೆ ಮನವಿ ಅರ್ಪಿಸಿತ್ತು. ಆದರೆ ಕೆಲವಷ್ಟ ಎಕರೆ ಜಮೀನು ಬಿಡುಗಡೆಯಾಗಿದ್ದು ಇದು ಭೂಹೀನರಿಗೆ ಸಿಕ್ಕಿಲ್ಲ. ಆದ್ದರಿಂದ ಮಳೆಬಿದ್ದ ತಕ್ಷಣ ಜಮೀನನ್ನು ಆಕ್ರಮಿಸಲು ಭೂಹೀನರು ಯೋಜನೆ ಹಾಕುತ್ತಿದ್ದಾರೆ. ಕೋಲಾರಕ್ಕೆ ತೆರಳಿದ ನಿಯೋಗದಲ್ಲಿ ತಾಲ್ಲೂಕಿನ ರೈತ ನಾಯಕ ಮುನೀಶ್ವರಾಚಾರಿ, ಶ್ರೀರಾಮರೆಡ್ಡಿ, ಸಿ. ವಿ. ನಾರಾಯಣಸ್ವಾಮಿ ಮತ್ತು ಜನಪ್ರಿಯ ವಕೀಲ ಆರ್. ವೆಂಕಟರಾಮಯ್ಯ ಅವರು ಇದ್ದರು.

○

ಚುನಾವಣೆ ಗೂಂಡಾಗಿರಿ ಖಂಡನೆ

ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಬೆಂಗಳೂರು ನಗರ ಸಮಿತಿಯು ಕಾಲೇಜಿನ ಚುನಾವಣೆಗಳಲ್ಲಿನ ಗೂಂಡಾಗಿರಿ ಮತ್ತು ದುಂದುವೆಚ್ಚವನ್ನು ತಡೆಯಲು ವ್ಯಾಪಕ ಕ್ರಮ ಕೈಗೊಳ್ಳಲು ಕರೆಕೊಟ್ಟಿದೆ. ಆಯ್ಕೆಯಾದ ಅಭ್ಯರ್ಥಿ, ಯಾವುದೇ ರಾಜಕೀಯ ಅಭಿಪ್ರಾಯ ಉಳ್ಳವನಾದರೂ ಪ್ರತಿಯೊಬ್ಬರೂ ಮಾನ್ಯತೆ ನೀಡಬೇಕೆಂದು ಸಮಿತಿ ಸೂಚಿಸುತ್ತದೆ. ಸರ್ಕಾರಿ ಕಾಲೇಜಿನ ಚುನಾವಣೆಯಲ್ಲಿ ನಡೆದ ಗೂಂಡಾಗಿರಿಯನ್ನು ಸಮಿತಿ ಖಂಡಿಸಿದೆ.

●

ಚಿಂತಾಮಣಿ ಎಸ್. ಎಫ್. ಐ. ಆಶ್ರಯದಲ್ಲಿ ವಿಚಾರ ಸಂಕಿರಣ

ದಿನಾಂಕ 29-7-80 ರಂದು ಕೋಲಾರ ಜಿಲ್ಲೆಯ ಚಿಂತಾಮಣಿ ಎಸ್.ಎಫ್.ಐ. ಶಾಖೆಯು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಶಾಖೆಯ ಕಾರ್ಯದರ್ಶಿ ಕಾಂ. ಹರೀಂದ್ರ ಸ್ವಾಗತಿಸಿದ ನಂತರ ಎಸ್.ಎಫ್.ಐ ರಾಜ್ಯಶಾಖೆ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ 'ವೈಜ್ಞಾನಿಕ ಶಿಕ್ಷಣ ಪದ್ಧತಿ' ಎಂಬ ವಿಷಯದ ಬಗ್ಗೆ ಮಾತನಾಡಿದರು. ನಂತರ 'ವಿದ್ಯಾರ್ಥಿ ಮತ್ತು ಸಮಾಜ' ಎಂಬ ವಿಷಯದ ಬಗ್ಗೆ ಸಿ.ಪಿ.ಐ. (ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರವರು ಮಾತನಾಡಿದರು. ಚಿಂತಾಮಣಿ ಎಸ್.ಎಫ್.ಐ. ಶಾಖೆಯ ಅಧ್ಯಕ್ಷ ಕಾಂ. ವಿಶ್ವನಾಥ್ ವಂದನಾರ್ಪಣೆ ಮಾಡಿದರು.

○

ಶಿಕ್ಷಕರ ಸತ್ಯಾಗ್ರಹಕ್ಕೆ ಬೆಂಬಲ

ದ. ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಅನ್ನಸತ್ಯಾಗ್ರಹ ನಡೆಸುತ್ತಿರುವ ನಿರುದ್ಯೋಗಿ ಶಿಕ್ಷಕರಿಗೆ ಬೆಂಬಲ ಸೂಚಿಸಲು ದ. ಕ. ಜಿಲ್ಲಾ ಸಿ. ಐ. ಟಿ.ಯು. ಸಮಿತಿಯ ಯು. ಬಿ. ಲೋಕಯ್ಯ ಮತ್ತು ಕಮಲಾಕ್ಷ ಅವರೂ ಸೇರಿದಂತೆ ಅನೇಕ ಕಾರ್ಮಿಕ ಮುಖಂಡರು 4-8-80ರಂದು ಶಿಕ್ಷಕರ ಜೊತೆ ಅನ್ನಸತ್ಯಾಗ್ರಹ ನಡೆಸಿದರು. ಜಿಲ್ಲೆಯ ನಿರುದ್ಯೋಗಿ ಶಿಕ್ಷಕರ ಈ ಹೋರಾಟಕ್ಕೆ ಸಿ.ಐ.ಟಿ.ಯು. ಸಂಪೂರ್ಣ ಬೆಂಬಲ ಕೊಡುತ್ತದೆ. ಅಲ್ಲದೆ ಸರ್ಕಾರ ಕೂಡಲೆ ಇತ್ಯರ್ಥ ಮಾಡಬೇಕೆಂದು ಒತ್ತಾಯಿಸುತ್ತದೆ.

ಕೆ.ಜಿ.ಎಫ್. ನಲ್ಲಿ ಸಮುದಾಯ ಶಾಖೆ

ಕೋಲಾರ ಚಿನ್ನದ ಗಣಿಯ ಸಮುದಾಯ ಶಾಖೆಯು 27-7-80 ರಂದು ಉದ್ಘಾಟನೆಯಾಯಿತು. ಶ್ರೀ ದೇವರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಶ್ರೀ ಕಾರ್ಲೋಸ್ ಶಾಖೆಯನ್ನು ಉದ್ಘಾಟಿಸಿದರು. ಶ್ರೀ ಮಾರಿಯಪ್ಪನ್ ಅವರು ಪ್ರಗತಿಪರ ಸಾಹಿತ್ಯ ಮತ್ತು ಕಲೆಯ ಬಗ್ಗೆ ಮಾತನಾಡಿದರು. ಸಮುದಾಯದ ಕಾರ್ಯದರ್ಶಿ ಶ್ರೀ ಕೃಷ್ಣಸ್ವಾಮಿ ಸಮುದಾಯದ ಪರಿಚಯ ಮಾಡಿಕೊಟ್ಟರು.

ದಲಿತಸಂಘರ್ಷ ಸಮಿತಿಯ ಶ್ರೀ ಪಿಚ್ಚಹಳ್ಳಿ ಶ್ರೀನಿವಾಸ್ ಮತ್ತು ಸಂಗಡಿಗರು ಕ್ರಾಂತಿಗೀತೆಗಳನ್ನು ಹಾಡಿದರು. ಸ್ಥಳೀಯ ಕಲಾವಿದರು "ಬೆಲ್ಚಿ" ನಾಟಕ ಪ್ರದರ್ಶಿಸಿದರು.

○

ಪೋಲೀಸ್ ದೌರ್ಜನ್ಯದ ಖಂಡನೆ

ದ. ಕನ್ನಡ ಜಿಲ್ಲಾ ರೈತಸಂಘದ ಸಭೆಯು 31-7-80ರಂದು ಮಂಗಳೂರಿನಲ್ಲಿ ನಡೆಯಿತು. ಕಾಂ. ಅಬ್ರಹಾಂ ಕರ್ಕಡ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಯು. ಜನಾರ್ಧನ ನಾಯಕ್ ಅವರು ವರದಿ ಒಪ್ಪಿಸಿದ ನಂತರ ಕೆ. ವಿ. ರಾವ್, ರುಕ್ಮಯ್ಯ ಪೂಜಾರಿ, ಬಿ. ನಾರಾಯಣ, ಜಿ. ಕೃಷ್ಣಪ್ಪ, ಕೆ. ಮೋನಪ್ಪ, ಲಕ್ಷ್ಮಣಗೌಡ, ವಾಸುಗಟ್ಟಿ, ಶಿವರಾಮಶೆಟ್ಟಿ ವರದಿಯ ಮೇಲೆ ಮಾತನಾಡಿದರು. ಇತ್ತೀಚೆಗೆ ಆರಂಭವಾದ ರೈತಚಳುವಳಿಯನ್ನು ಕುರಿತು ಚರ್ಚೆ ನಡೆಯಿತು. ರೈತರ ಮೇಲಿನ ದೌರ್ಜನ್ಯವನ್ನು ಸಭೆ ತೀವ್ರವಾಗಿ ಖಂಡಿಸಿತು. ದ. ಕನ್ನಡ ಜಿಲ್ಲೆಯ ಎಲ್ಲ ತಾಲ್ಲೂಕುಗಳ ಭೂನ್ಯಾಯ ಮಂಡಲಿಗಳ ಅವ್ಯವಹಾರಗಳ ವಿರುದ್ಧ ಚಳುವಳಿಯನ್ನು ಸಂಘಟಿಸಲು ಸಭೆ ನಿರ್ಣಯಿಸಿತು. ಆಗಸ್ಟ್ 18ರ ಸಾರ್ವತ್ರಿಕ ಮುಷ್ಕರದಲ್ಲಿ ರೈತರೂ ಕೃಷಿಕಾರ್ಮಿಕರೂ ಭಾಗವಹಿಸುವಂತೆ ಕೋರಲಾಯಿತು. ಕಾಂ ಕೆ. ಆರ್. ಶ್ರೀಯಾನ್ ಅವರು ಸಂಘಟನೆಯ ಬಗ್ಗೆ ಮಾತನಾಡಿದರು.

ದಾಂಡೇಲಿಯಲ್ಲಿ ಯುವಜನ ಸಭೆ

ಕರ್ನಾಟಕ ರಾಜ್ಯ ಯುವಜನ ಸಂಘಟನೆಯನ್ನು ದಾಂಡೇಲಿಯಲ್ಲಿ ಕ್ರಿಯಾಶೀಲಗೊಳಿಸುವ ಸಲುವಾಗಿ 27-7-80ರಂದು ಅಲ್ಲಿ ಸಭೆ ಕರೆಯಲಾಗಿತ್ತು. ಯುವಕರು ಉತ್ಸಾಹದಿಂದ ಹಾಜರಾಗಿದ್ದರು. ಸಭೆಯ ಅಧ್ಯಕ್ಷತೆಯನ್ನು ಜಿ. ಎ. ಪವಾರ್ ವಹಿಸಿದ್ದರು. ಸಭೆಯಲ್ಲಿ ರೈತ ಹೋರಾಟದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ಸಂಘಟನೆಯ ಮಹತ್ವವನ್ನು ಜಿ. ಎ. ಪವಾರ್ ವಿವರಿಸಿದರು. ನಂತರ ಭಾಸ್ಕರ ಎಲ್. ನಾಯಕ ಅವರು ಸಂಘಟನೆಯ ಧ್ಯೇಯ:ಧೋರಣೆಗಳನ್ನು ತಿಳಿಸಿದರು. ಜನ್ನು, ಎಮ್. ಆರ್. ನಾಯ್ಕ ಅವರು ಮಾತನಾಡಿದರು. ರಾಯಚೂರಿನ ಸಮ್ಮೇಳನದ ವರದಿಯನ್ನು ಉಮೇಶ ಪಿ. ನಾಯ್ಕ ತಿಳಿಸಿದರು. ಸಂಘಟನೆಗೆ ಸದಸ್ಯರಾಗಿ ಬಲಪಡಿಸಬೇಕೆಂದು ದಾಂಡೇಲಿಯ ಯುವಕರಿಗೆ ಕರೆಕೊಡಲಾಗಿದೆ.

○

ಹೋರಾಟಕ್ಕೆ ಬೆಂಬಲ

ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ನಡೆಯುತ್ತಿರುವ ರೈತರ ನ್ಯಾಯಯುತವಾದ ಹೋರಾಟವನ್ನು ಮಾರ್ಕ್ಸ್‌ವಾದಿ ಪಕ್ಷದ ಹೆಗ್ಗಳ ಶಾಖೆ ಬೆಂಬಲಿಸುತ್ತದೆ. ಈ ರೀತಿ ನ್ಯಾಯಯುತವಾಗಿ ಹೋರಾಟ ಮಾಡುತ್ತಿರುವ ರೈತರ ಮೇಲೆ ಅಮಾನುಷವಾಗಿ ವರ್ತಿಸಿ, ಪೋಲೀಸರಿಂದ ಗೋಲಿಬಾರು ಮಾಡಿಸುತ್ತಿರುವ ಸರಕಾರಿ ಯಂತ್ರವನ್ನು ತೀವ್ರವಾಗಿ ಖಂಡಿಸುತ್ತದೆ. ದೇಶದ ಬೆನ್ನೆಲುಬಾದ ರೈತರ ಹೋರಾಟವನ್ನು ದಮನ ಮಾಡಲು ಹೊರಟ ಗುಂಡೂರಾಯರ ಸರ್ಕಾರ ಒಡನೇ ರಾಜೀನಾಮೆ ಕೊಡಬೇಕೆಂದು ಈ ಮೂಲಕ ಶಾಖೆಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

ಉಡುಪಿಯಲ್ಲಿ ಬೆಲೆ ಏರಿಕೆ ಹೋರಾಟದ ನಿರ್ಣಯ

ಸಂಯುಕ್ತ ಕಾರ್ಮಿಕ ಕ್ರಿಯಾವೇದಿಕೆಯ ಆಶ್ರಯದಲ್ಲಿ 28-7-80 ರಂದು ಉಡುಪಿಯಲ್ಲಿ ಸಭೆ ನಡೆದು, ಇತ್ತೀಚೆಗೆ ವಿಪರೀತವಾಗಿ ಏರುತ್ತಿರುವ ಬೆಲೆಗಳ ದರವನ್ನು ವಿರೋಧಿಸಲು ಹೋರಾಟ ನಡೆಸಲು ತೀರ್ಮಾನಿಸಲಾಯಿತು. 8-8-80ರಂದು ಉಡುಪಿಯಲ್ಲಿ ಬೆಲೆಏರಿಕೆ ವಿರೋಧಿ ದಿನ ಮತ್ತು ಮತಪ್ರದರ್ಶನ ನಡೆಯಲಿದೆ. ವಿದ್ಯಾರ್ಥಿಗಳು, ಕಾರ್ಮಿಕರು, ಜನಸಾಮಾನ್ಯರು ಇದರಲ್ಲಿ ಭಾಗವಹಿಸಲಿದ್ದಾರೆ.

ಅಗತ್ಯಸೇವಾ ಮಸೂದೆ, ಕಾರ್ಮಿಕರ ಗಡೀಪಾರು ಕ್ರಮಗಳನ್ನು ಸಭೆ ಖಂಡಿಸಿತು. ಆಗಸ್ಟ್ 18ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಸಂಯುಕ್ತ ಕಾರ್ಮಿಕ ಕ್ರಿಯಾ ವೇದಿಕೆ ನಿರ್ಧರಿಸಿತು.

●

ಮಲಪ್ರಭಾ ರೈತ ಚಳುವಳಿ ನಿಲ್ಲಲಾರದು

(ಒಂದನೇ ಪುಟದಿಂದ)

3. ಎಲ್ಲ ಉಪಗಾವಲಿ-ಚಿಟಿಗಾವಲಿಗಳಿಗೆ ಕಡ್ಡಾಯವಾಗಿ ಸರಿಯಾದ ರೀತಿಯಲ್ಲಿ ಬೆಡ್ಡಿಂಗ್-ಲಾಯ್ನಿಂಗ್ ಹಾಕಬೇಕು.

4. ಸರಕಾರ ಸ್ವಾಧೀನಪಡಿಸಿಕೊಂಡ ರೈತರ ಜಮೀನುಗಳೆಲ್ಲವಕ್ಕೂ ಯೋಗ್ಯ ಪರಿಹಾರಧನ ಸಿಗುವುದರ ಜೊತೆಗೆ ಅದು ಆಯಾ ತಾಲ್ಲೂಕ ಸ್ಥಳಗಳಲ್ಲೇ ಕೂಡಲೇ ಸಿಗಬೇಕು.

5. ಭೂ ಸಮಪಾತಳಿಯನ್ನು ಸರಕಾರವು ಕಡ್ಡಾಯವಾಗಿ ಉಚಿತವಾಗಿ ಮಾಡಿಸಬೇಕು.

6. ಪಾರ್ಥೇನಿಯಂ ಕಸವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವ ಕ್ರಮವನ್ನು ಸರಕಾರ ತ್ವರಿತವಾಗಿ ಅನುಸರಿಸಬೇಕು.

7. ಆಕಸ್ಮಾತ್ತಾಗಿ ಪ್ರಕೃತಿ ವಿಕೋಪಕ್ಕೆ ಬಲಿಯಾಗಿ ಬೆಳೆಗಳು ಫೇಲಾದರೆ ಅಂಥ ಸಂದರ್ಭದಲ್ಲಿ ರೈತನಿಗೆ ಪರಿಹಾರ ಸಿಗುವಂತಾಗಲು ಸರಕಾರ ಕೂಡಲೇ ಬೆಳೆವಿಮಾ ಯೋಜನೆಯನ್ನು ಜಾರಿಗೆ ತರಬೇಕು.

8. ಹೆಚ್ಚಾಗಿ ನೀರು ಹರಿಯುವುದರಿಂದಾಗಿ ಆಗುವ ಅನಾಹುತಗಳನ್ನು ತಪ್ಪಿಸಲೋಸುಗ ಸರಕಾರ ಸರಿಯಾದ 'ಬಸಿಗಾವಲು' ಯೋಜನೆಯನ್ನು ಕೂಡಲೇ ಕಾರ್ಯರೂಪಕ್ಕಿಳಿಸಬೇಕು.

9. ಬಂಡವಾಳಶಾಹಿ- ವ್ಯಾಪಾರಶಾಹಿ ದಲಾಲಿಗಳಿಂದರೈತರುಶೋಷಣೆಗೊಳ್ಳದಂತಾಗಲು ಸರಕಾರ ರೈತರ ಎಲ್ಲಹುಟ್ಟುವಳಿಗಳಿಗೂನ್ಯಾಯಸಮ್ಮತ ಸುರಕ್ಷಿತ ಬೆಲೆಗಳನ್ನು ನಿಗದಿಪಡಿಸಬೇಕು.

10. ಸುರಕ್ಷಿತ ಬೆಲೆಗಳನ್ನು ನಿಗದಿಪಡಿಸುವ ಸರಕಾರಿ ಸಮಿತಿಗಳಲ್ಲಿ ರೈತ ಪ್ರತಿನಿಧಿಗಳಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಬೇಕು.

11. ರೈತರ ಎಲ್ಲ ಹುಟ್ಟುವಳಿಗಳಿಗೆ ಸುರಕ್ಷಿತ ಬೆಲೆಗಳು ಪ್ರತಿವರ್ಷ ಸುಗ್ಗಿಯ ಮೊದಲೇ ನಿಗದಿಗೊಳಿಸಬೇಕು.

12. ವರಲಕ್ಷ್ಮಿ ಹತ್ತಿಗೆ ನೂಲು ಮತ್ತು ಕಾಂಟ ಆಧರಿಸಿ ಪ್ರತಿಕ್ವಿಂಟಾಲಿಗೆ ರೂ. 600ರಿಂದ 800ರ ವರೆಗೆ ಸುರಕ್ಷಿತ ಬೆಲೆಯನ್ನು ಸರಕಾರ ನಿಶ್ಚಿತಪಡಿಸಬೇಕು.

13. ಮಹಾರಾಷ್ಟ್ರದಲ್ಲಿರುವ "ಏಕಸ್ವಾಮ್ಯ ಹತ್ತಿ ಕರೀದಿ ಯೋಜನೆ" ಯಂತೆಯೆ ಕರ್ನಾಟಕದಲ್ಲೂ ಕೂಡ ಭಾರತ ಹತ್ತಿ ಕಾರ್ಪೊರೇಶನ್, ಭಾರತ ಆಹಾರಧಾನ್ಯ ಕಾರ್ಪೊರೇಶನ್ ಮುಂತಾದ ಸರಕಾರಿ ಸಂಸ್ಥೆಗಳು ರೈತರು ಮಾರುಕಟ್ಟೆಗೆ ತಂದ ದ್ದೆಲ್ಲವನ್ನೂ ನ್ಯಾಯಯುತ ಬೆಲೆಗೆ ಖರೀದಿಸಬೇಕು.

14. ಒಕ್ಕಲುತನ ಆವಶ್ಯಕ ವಸ್ತುಗಳಾದ ಬೀಜ, ಗೊಬ್ಬರ, ಕ್ರಿಮಿನಾಶಕ ಹಾಗೂ ಯಾಂತ್ರೋಪಕರಣಗಳು ಸರಕಾರಿ ಸಹಕಾರಿ ಸಂಸ್ಥೆಗಳ ಮೂಲಕ ಸಬ್‌ಸಿಡಿಕೊಟ್ಟು ರೈತರಿಗೆ ಸವಿ ದರದಲ್ಲಿ ಸಿಗಬೇಕು.

15. ಎಲ್ಲ ಜೀವನಾವಶ್ಯಕ ವಸ್ತುಗಳು ಸಾರ್ವಜನಿಕ ವಿತರಣೆ ವ್ಯವಸ್ಥೆಯ ಮೂಲಕ ರೈತರಿಗೆ ಯೋಗ್ಯ ಬೆಲೆಗೆ ಸಿಗಬೇಕು.

16. ಈ ಪ್ರದೇಶದಲ್ಲಿ ರೈತರಿಗೆ ಸರಕಾರ ಇನ್ನು ಹೆಚ್ಚಿನ ಸಾಲ ಸೌಲಭ್ಯ ನೀಡಬೇಕು.

17. ಸಹಕಾರಿ-ಸರಕಾರಿ ಬ್ಯಾಂಕ ಹಾಗೂ ಸೊಸೈಟಿಗಳು ಸಾಲ ನೀಡುವಲ್ಲಿ ಬಡ ಹಾಗೂ ಮಧ್ಯಮವರ್ಗದ ರೈತರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು.

18. ರೈತರಿಗೆ ಕೊಡುವ ಸಾಲಕ್ಕೆ ಅತೀ ಸುಲಭ ಬಡ್ಡಿದರದಲ್ಲಿ ಅಂದರೆ ಸುಮಾರು ಪ್ರತಿಶತ 4% ಅಷ್ಟನ್ನು ಮಾತ್ರ ಬಡ್ಡಿ ಆಕರಣೆ ಮಾಡಬೇಕು.

19. ರೈತರಿಗೆ ಇಲ್ಲಿಯವರೆಗೆ ಕೊಟ್ಟಿರುವ ಸರಕಾರಿ ಸಹಕಾರಿ ಸಾಲವನ್ನು ಸರಕಾರ ಸಂಪೂರ್ಣವಾಗಿ ರದ್ದುಪಡಿಸಬೇಕು.

20. ಹಿಂದಿನ ಸಾಲವನ್ನು ಗಣನೆಗೆ ತೆಗೆದುಕೊಳ್ಳದೆ ಕಡಿಮೆ ಬಡ್ಡಿದರದಲ್ಲಿ ರೈತರಿಗೆ ಹೊಸ ಸಾಲವನ್ನು ಮಂಜೂರು ಮಾಡಬೇಕು.

21. ಮಿತಿಮೀರಿ ಹೇರಿದ ಬೆಟರ್‌ಮೆಂಟ್ ಲೆವಿಯನ್ನು ಸರಕಾರ ಸಂಪೂರ್ಣ ರದ್ದುಪಡಿಸಬೇಕು.

22. ಮೊದಲಿನ ಹತ್ತು ವರ್ಷಗಳನ್ನು ಪ್ರಾಯೋಗಿಕ ವರ್ಷಗಳೆಂದು ಪರಿಗಣಿಸಿ ನೀರಿನಕರ, ಮೆಂಟೆನನ್ಸ್‌ಗಳೆರಡನ್ನು ರದ್ದುಪಡಿಸಬೇಕು.

23. ಡ್ಯಾಮಿನಲ್ಲಿ ಹೆಚ್ಚಾದ ನೀರನ್ನು ಹರಿಬಿಟ್ಟುದರಿಂದಾಗಿ ಕೊಳ್ಳ ಸಾಲಿನ ಊರುಗಳಲ್ಲಿ ಮಹಾಪುರ ಉಂಟಾಗಿ ಆದ ನಷ್ಟಕ್ಕೆ ಸರಕಾರ ಪರಿಹಾರ ಧನವನ್ನು ಕೊಡಬೇಕು.

●

ರೈತರ ಮೇಲಿನ ದಬ್ಬಾಳಿಕೆಯ ಖಂಡನೆ

(ಒಂದನೇ ಪುಟದಿಂದ)

ವಾಗಿ ಜನತೆಯ ಮೇಲೆ ಲಾಠಿಚಾರ್ಜ್, ಗೋಲಿಬಾರ್, ಕರ್ಫ್ಯೂ 144ನೆಯ ಕಲಂಗಳ ಮೂಲಕ ದಬ್ಬಾಳಿಕೆಯನ್ನು ಹರಿಬಿಟ್ಟಿದೆ. ಇತ್ತೀಚೆಗೆ ಮುಖ್ಯಮಂತ್ರಿಗಳು ರೈತರಿಗೆ ನೀಡಿದ ಪರಿಹಾರಗಳು ಜನತೆಯ ಕಣ್ಣೊರಸುವ ತಂತ್ರಗಳಾಗಿವೆ ಮಾತ್ರ.

ನಿರಪರಾಧಿ ರೈತರು ಅನೇಕರನ್ನು ಬಂಧಿಸಲಾಗಿದೆ. ಮತ್ತು ಈ ಪ್ರದೇಶದಲ್ಲಿ ಭಯದ ವಾತಾವರಣವನ್ನು ನಿರ್ಮಿಸಲಾಗುತ್ತಿದೆ. ಈ ದಬ್ಬಾಳಿಕೆಯ ನೀತಿಯನ್ನು ಬಿಟ್ಟುಕೊಟ್ಟು ಜನತೆಯ ಕ್ಷೋಭೆಯ ಕಾರಣಗಳನ್ನು ಅರಿತು ಸರಕಾರ ಸೂಕ್ತ ಹಾಗೂ ತ್ವರಿತ ಕ್ರಮ ಕೈಕೊಳ್ಳಬೇಕೆಂದು ರೈತ ಸಂಘ ಒತ್ತಾಯಿಸುತ್ತದೆ. ಬಂಧಿತ ರೈತರೆಲ್ಲರನ್ನು ಕೂಡಲೇ ಬಿಡುಗಡೆ ಮಾಡಬೇಕು. ಗೋಲಿಬಾರಿಗೆ ತುತ್ತಾದವರ ಕುಟುಂಬಗಳಿಗೆ ಪರಿಹಾರ ನೀಡಬೇಕು. ರೈತರ ಜತೆ ಚರ್ಚೆಯ ಮೂಲಕ ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕು. ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಲು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಪ್ರಾಂತ ರೈತಸಂಘ ಒತ್ತಾಯಿಸುತ್ತದೆ.

ದಬ್ಬಾಳಿಕೆಯ ಎಲ್ಲ ಕ್ರಮಗಳನ್ನು ಹಿಂತೆಗೆದುಕೊಂಡು ಅನವಶ್ಯಕವಾಗಿ ದೀರ್ಘ ಕಾಲದವರೆಗೆ ಹೇರಲಾಗಿರುವ 144ನೆಯ ಕಲಂ ಮುಂತಾದ ಪ್ರತಿಬಂಧಕಾಜ್ಞೆಗಳನ್ನು ಹಿಂತೆಗೆದುಕೊಂಡು ಜನತೆಯ ಸಮಸ್ಯೆಗಳಿಗೆ ಗಮನವೀಯುವದೊಂದೇ ನ್ಯಾಯವಾದ ಮಾರ್ಗವಾಗಿದೆ. ಇಲ್ಲವಾದರೆ ಈ ಹೋರಾಟ ರಾಜ್ಯವ್ಯಾಪ್ತಿಯಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲವೆಂದು ಕರ್ನಾಟಕ ಪ್ರಾಂತ ರೈತ ಸಂಘ ಸರಕಾರಕ್ಕೆ ಎಚ್ಚರಕೊಡಬಯಸುತ್ತದೆ. ಇದೇ 12, 13, 14 ರಂದು ದೊಡ್ಡಬಳ್ಳಾಪುರದಲ್ಲಿ ನಡೆಯುವ ಪ್ರಾಂತ ಕಾರ್ಯಕಾರಿ ಸಮಿತಿಯಲ್ಲಿ ಸರಕಾರವನ್ನು ಮೇಲ್ಕಂಡ ಬೇಡಿಕೆಗಳಿಗೆ ಒತ್ತಾಯಿಸಲು ರಾಜ್ಯವ್ಯಾಪ್ತಿ ಅಂದೋಲನವನ್ನು ರೂಪಿಸುವ ಬಗೆಗೆ ನಿರ್ಣಯ ತೆಗೆದುಕೊಳ್ಳಲಾಗುವುದು. ●

ಬಾಗೇಪಲ್ಲಿಯಲ್ಲಿ ಗೋಲೀಬಾರ್

ಕೋಲಾರ ಜಿಲ್ಲಾ ಬಾಗೇಪಲ್ಲಿಯಲ್ಲಿ ರೈತಸಂಘದಕರೆಯಮೇರೆಗೆ ಬಂದ್ ಆಚರಿಸಿದಾಗ ಪೋಲೀಸ್ ಗೋಲೀಬಾರ್‌ನಲ್ಲಿ ಮೂವರು ಸತ್ತಿರುವರು. ಪೋಲೀಸ್ ಗೋಲೀಬಾರನ್ನು ತೀವ್ರವಾಗಿ ಖಂಡಿಸಿದ ಸಿ. ಪಿ. ಐ. (ಎಂ) ರಾಜ್ಯಸಮಿತಿ, ನ್ಯಾಯಾಂಗ ತನಿಖೆ ನಡೆಸಲು ಒತ್ತಾಯಿಸಿದೆ. ರಾಜ್ಯದಾದ್ಯಂತ ಪೋಲೀಸ್ ದೌರ್ಜನ್ಯವನ್ನು ಪ್ರತಿಭಟಿಸಿ ಹೋರಾಡಲು ರಾಜ್ಯಸಮಿತಿ ಕರೆಯಿತ್ತಿದೆ.

ಇಂಡಾಲ್ ಕಾರ್ಮಿಕರ ಹೋರಾಟ ಮುಕ್ತಾಯ

ಬೆಳಗಾವಿಯ ಇಂಡಾಲ್ ಕಾರ್ಮಿಕರ ಹೋರಾಟವು ಯಶಸ್ವೀ ಮುಕ್ತಾಯವಾಗಿದೆ. ವಿವರಗಳನ್ನು ಮುಂದಿನ ವಾರ ಕೊಡಲಾಗುವುದು.

ಸಂಪಾದಕೀಯ

(ಒಂದನೇ ಪುಟದಿಂದ)

ರುವ ಕಾಂಗ್ರೆಸ್ ಪಕ್ಷವೇ ಇದಕ್ಕೆಲ್ಲಾ ಪ್ರೋತ್ಸಾಹ ಕೊಡುತ್ತಾ ಬಂದಿರುವುದರಿಂದ ಮುಖ್ಯಮಂತ್ರಿಯವರು ಹೊಸದಾಗಿ ರಚಿಸುವ ಗುಪ್ತಚಾರ ವಿಭಾಗವು ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ಸಹಾಯಮಾಡುವುದಕ್ಕಲ್ಲ: ಬದಲು ತಮ್ಮ ವಿರೋಧಿಗಳನ್ನು ಮತ್ತು ವಿರೋಧ ಪಕ್ಷಗಳ ಮುಂದಾಳುಗಳನ್ನು ಬಗ್ಗು ಬಡೆಯುವುದಕ್ಕಾಗಿದೆ ಎಂಬುದು ಸ್ಪಷ್ಟ. ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಆಯ್ಕೆಯಾಗಬೇಕಾದರೆ ಸುಮಾರು ಮೂವತ್ತು ಸಹಸ್ರ ರೂಪಾಯಿಗಳನ್ನು ಲಂಚವಾಗಿ ಕೊಡಬೇಕಾಗಿದೆ ಎಂದು ಸರ್ವೇಸಾಮಾನ್ಯವಾಗಿ ಎಲ್ಲರೂ ಮಾತನಾಡುತ್ತಲಿರುವಾಗ, ಅದೇ ಇಲಾಖೆಯ ಉನ್ನತಾಧಿಕಾರಿಗಳ ನೇತೃತ್ವದಲ್ಲಿ ಭ್ರಷ್ಟಾಚಾರ ತಡೆಯುವ ಕೆಲಸವನ್ನು ಮಾಡುವೆವೆನ್ನುವುದು ತೀರಾ ಹಾಸ್ಯಾಸ್ಪದ. ಈ ಎಲ್ಲ ಕ್ರಮಗಳೂ ಮುಖ್ಯಮಂತ್ರಿಗಳ, ಆಡಳಿತ ಪಕ್ಷದ ಕೆಲವರ ರಕ್ಷಣೆಗಾಗಿಯೇ ಇದೆ ಎಂಬುದೂ ಸ್ಪಷ್ಟ. ಮುಖ್ಯಮಂತ್ರಿಯವರು ಈಗ ಮಾಡಬೇಕಾಗಿದ್ದುದು ರೀಸರ್ಚ್ ಮತ್ತು ಸಂಶೋಧನಾ ವಿಭಾಗ ರಚಿಸುವುದಲ್ಲ, ಬದಲು ಸದ್ಯ ಗಂಭೀರ ಅಪಾದನೆಗೊಳಗಾಗಿರುವ ಸಚಿವರ ರಾಜೀನಾಮೆ ಕೇಳುವುದು. ●

ಎ. ಕೆ. ಗೋಪಾಲನ್ ಸ್ಮಾರಕ ಸಾಮಾಜಿಕ ಅಧ್ಯಯನ ಕೇಂದ್ರದ ಸಹಾಯಾರ್ಥ ಸಮುದಾಯ ತಂಡದವರು "ಕುರಿ" ನಾಟಕವನ್ನು ಆಗಸ್ಟ 17ರಂದು ಮಧ್ಯಾಹ್ನ 2 ಗಂಟೆಗೆ ಪ್ರದರ್ಶಿಸಲಿದ್ದಾರೆ. ಸ್ಥಳ: ರವೀಂದ್ರ ಕಲಾಕ್ಷೇತ್ರ. ಟಿಕೇಟುಗಳನ್ನು ಕೊಂಡು ಸಹಕರಿಸಬೇಕಾಗಿ ಅಧ್ಯಯನ ಕೇಂದ್ರ ಕೋರುತ್ತದೆ.

ನಿರುದ್ಯೋಗಿ ಶಿಕ್ಷಕರ ಹೋರಾಟಕ್ಕೆ ಬೆಂಬಲ

ದ.ಕ. ಜಿಲ್ಲೆಯ ನಿರುದ್ಯೋಗಿ ಶಿಕ್ಷಕರು ತಮ್ಮ ನ್ಯಾಯಬದ್ಧವಾದ ಬೇಡಿಕೆಗಳನ್ನು ಒತ್ತಾಯಿಸಿ, ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ನಡೆಸುತ್ತಿರುವ ಸತ್ಯಾಗ್ರಹಕ್ಕೆ ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಮಂಗಳೂರು ತಾಲ್ಲೂಕು ಸಮಿತಿಯು ಸಂಪೂರ್ಣ ಬೆಂಬಲವನ್ನು ಘೋಷಿಸಿದೆ. ದ.ಕ. ಜಿಲ್ಲೆಯಲ್ಲಿ 2000ಕ್ಕೂ ಮಿಕ್ಕಿ ತರಬೇತಾದ ನಿರುದ್ಯೋಗಿ ಶಿಕ್ಷಕ ಶಿಕ್ಷಕಿಯರಿದ್ದು, 1200ಕ್ಕೂ ಮಿಕ್ಕಿ ಶಿಕ್ಷಕರ ಹುದ್ದೆಗಳು ಖಾಲಿಬಿದ್ದಿರುವಾಗ ಸರಕಾರವು ಈ ವಿಷಯದಲ್ಲಿ ವಹಿಸುತ್ತಿರುವ ಅಸಡ್ಡೆಯನ್ನು ಖಂಡಿಸಿದ ಯುವಜನ ಸಂಘಟನೆಯು ತರಬೇತಿ ಪಡೆದು ನಿರುದ್ಯೋಗಿಗಳಾಗಿರುವ ಎಲ್ಲಾ ಶಿಕ್ಷಕ ಶಿಕ್ಷಕಿಯರನ್ನು ಕೂಡಲೇ ಕೆಲಸಕ್ಕೆ ನೇಮಿಸಬೇಕೆಂದೂ, ನಿರುದ್ಯೋಗಿ ಶಿಕ್ಷಕರ ಹೋರಾಟ ಸಮಿತಿಯು ಸರಕಾರದ ಮುಂದಿಟ್ಟಿರುವ ಎಲ್ಲಾ ಬೇಡಿಕೆಗಳನ್ನೂ ಕೂಡಲೇ ಈಡೇರಿಸಬೇಕೆಂದೂ ಸರಕಾರವನ್ನು ಒತ್ತಾಯಿಸಿದೆ.

○

ಸಕ್ಕರೆಯನ್ನು ಕಹಿಮಾಡಿದ ಸರ್ಕಾರ

ಕೇಂದ್ರ ಸರ್ಕಾರವು ಸಕ್ಕರೆಯ ಬಗ್ಗೆ ಅನುಸರಿಸುತ್ತಿರುವ ಇಬ್ಬಗೆ ನೀತಿಯಿಂದ, ವ್ಯಾಪಾರಿಗಳು, ಸದಕುದಾರರು ಲಾಭ ಲೂಟಿ ಹೊಡೆಯಲು ಅವಕಾಶವಾಗಿದೆ. ಆದರೆ ಬಳಕೆದಾರರಿಗೆ ಸಕ್ಕರೆ ಕಹಿಯಾಗುತ್ತಾ ಬಂದಿದೆ. ಬೆಂಗಳೂರಿನಲ್ಲಿ ರೇಷನ್ ಮೂಲಕ ಕೊಡುತ್ತಿರುವ ಸಕ್ಕರೆ ಅರ್ಧಕ್ಕರ್ಧ ಅಪಬಳಕೆಯಾಗುತ್ತಿದೆ. ಹಳ್ಳಿಗಳಲ್ಲಿ ಸಹಕಾರಿ ಸಂಘಗಳ ಮೂಲಕ ಕೊಡಲಾಗುತ್ತಿರುವ ಸಕ್ಕರೆ ಕಾಳಸಂತೆಕೋರರ ಕೈಸೇರುತ್ತಿದೆ. ಕಳೆದವಾರ ಬೆಂಗಳೂರಿನಲ್ಲಿ ಕೆಲವೆಡೆ ಸಕ್ಕರೆಯ ಕಾಳಸಂತೆ ಬೆಲೆ ರೂ. 9-20 ಇತ್ತು. ಕೆಲವೆಡೆ ಇನ್ನೂ ಹೆಚ್ಚಿರಬಹುದು.

ದೇಶದಾದ್ಯಂತ ಕಬ್ಬಿನ ಉತ್ಪಾದನೆಯಲ್ಲಿ ಇಳಿತ, ಸಕ್ಕರೆ ಕಾರ್ಖಾನೆ ಮತ್ತು ಕಬ್ಬು ಬೆಳೆಗಾರರ ನಡುವಣ ವಿರಸ, ಸಕ್ಕರೆ ರಾಕ್ಷಸರಿಗೆ ಸರ್ಕಾರದ ನೀತಿಯ ಬಗ್ಗೆ ಹಿತ್ತಿಲುಬಾಗಿಲ ತಿಳುವಳಿಕೆ ನೀಡಿಕೆ, ಸಕ್ಕರೆಯ ಮೇಲೆ ಪೂರ್ಣ ನಿಯಂತ್ರಣ ಸ್ಥಾಪಿಸಲು ಇತ್ತೀಚೆಗೆ ಕೇಂದ್ರ ಕೃಷಿ ಸಚಿವರ ನಕಾರ-ಇವೆಲ್ಲವೂ ಸಕ್ಕರೆಯನ್ನು ಮತ್ತಷ್ಟು ಕಹಿಗೊಳಿಸುವ ಸಂಭವವಿದೆ.

○

ಜಿಲ್ಲಾ ರೈತಸಂಘ ಸಭೆ

ಬೆಂಗಳೂರು ಜಿಲ್ಲಾ ರೈತಸಂಘದ ಸದಸ್ಯರ ಸಭೆಯು ಆಗಸ್ಟ್ ನಾಲ್ಕರಂದು ದೊಡ್ಡಬಳ್ಳಾಪುರದಲ್ಲಿ ನಡೆಯಿತು. ಹಲವಾರು ಉತ್ಸಾಹಿ ರೈತರು ಸಭೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ ಅವರು ಅಧ್ಯಕ್ಷತೆ ವಹಿಸಿದರು. ರೈತರನ್ನು ಸಂಘಟಿಸಲು ಹಲವು ಕಾರ್ಯಕ್ರಮಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT